
ನವಸಾಕ್ಷರ ಪುಸ್ತಕ ಮಾಲೆ ೪೧

ಮೈಸೂರು

ನೊ.ಸಂ. ತಿಮ್ಮೇಗೌಡ





ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಪಾದಕ ಸಮಿತಿ


ಲೋಕಶಿಕ್ಷಣ ನಿರ್ದೇಶನಾಲಯ

ನವಸಾಕ್ಷರ ಪುಸ್ತಕ ಮಾಲೆ - ೪೧

ಮೈಸೂರು

ನೊ. ಸಂ. ತಿಮ್ಮೇಗೌಡ





ಪ್ರಸಾರಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ ೫೮೩ ೨೧೧

MYSORE: By No. Som.Thimmegowda, Published by the Director of Prasaranga, Kannada University, Hampi - 583 211, Karnataka.
First Impression 1994, Pp. 28, Rs. 8-00


ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ


ಬೆಲೆ : ರೂ. ೮-೦೦

ಮುದ್ರಕರು
ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ
ಬೆಂಗಳೂರು - ೧೮
ದೂರವಾಣಿ : ೬೬೧೩೧೨೩



ಮೈಸೂರು

ನನ್ನ ಚಿಕ್ಕಮ್ಮ ಪದ್ಮಕ್ಕ. ಚಿಕ್ಕಪ್ಪ ಸೀತಾರಾಮು. ಇವರು ಮೈಸೂರಿನಲ್ಲಿ ಇದ್ದಾರೆ. ಮೂರುನಾಲ್ಕು ವರ್ಷಗಳಿಂದ ನಮ್ಮನ್ನು ಮೈಸೂರಿಗೆ ಕರೆಯುತ್ತಿದ್ದರು. ಈ ಸಾರಿ ನಮ್ಮ ಊರಿಗೆ ಬಂದಿದ್ದರು. ಮೈಸೂರಿನ ದಸರಾ ನೋಡಲು ಬನ್ನಿ ಎಂದು ಒತ್ತಾಯ ಮಾಡಿದರು. ನಾವು ದಸರಾಕ್ಕೆ ಕುಟುಂಬ ಸಮೇತ ಹೊರಟೆವು. ನಮ್ಮ ಹಳ್ಳಿಯಿಂದ ಬೆಂಗಳೂರಿಗೆ ಬಂದೆವು. ಅಲ್ಲಿಂದ ಮೈಸೂರಿಗೆ ಹೋದೆವು. ಬೆಂಗಳೂರಿನಿಂದ ಮೈಸೂರಿಗೆ ನೂರಮೂವತ್ತೆಂಟು ಕಿಲೋಮೀಟರ್ ಹಾದಿ. ಬಸ್ಸಿನಲ್ಲಿ ಮೂರುಗಂಟೆಯ ದಾರಿ. ನಾವು ಮೈಸೂರು ಬಸ್ ನಿಲ್ದಾಣದಲ್ಲಿ ಇಳಿದೆವು. ಚಿಕ್ಕಮ್ಮ ಇರುವುದು ಬೃಂದಾವನ ಬಡಾವಣೆ. ಅಲ್ಲಿಗೆ ಹೋಗಲು ಆಟೋ, ಬಸ್ಸು, ಟಾಂಗಾ, ಕಾರುಗಳು ದೊರಕುತ್ತವೆ. ಮೈಸೂರಿನ ಟಾಂಗಾ ಕೂರಲು ಚೆನ್ನ. ಟಾಂಗಾದಲ್ಲೇ ಹೋಗೋಣ ಎಂದು ಮಕ್ಕಳು ಆಸೆಪಟ್ಟರು. ನಾವು ಎರಡು ಟಾಂಗಾ ಗೊತ್ತುಮಾಡಿದೆವು. ಬಸ್ ನಿಲ್ದಾಣದಿಂದ ಮನೆಗೆ ಹೊರಟೆವು. ಕುದುರೆ, ಟಾಂಗಾವನ್ನು ಲೀಲಾಜಾಲವಾಗಿ ಎಳೆಯುತ್ತಿತ್ತು. ಮಕ್ಕಳು ಬಹಳ ಖುಷಿಪಟ್ಟರು.



ಲಲಿತಮಹಲ್ ಅರಮನೆ.

ಮೈಸೂರಿನಲ್ಲಿ ರಸ್ತೆಗಳು ವಿಶಾಲವಾಗಿವೆ. ಅವುಗಳಿಗೆ ಸಯ್ಯಾಜಿರಾವ್ ರಸ್ತೆ, ದೇವರಾಜ್ ಅರಸು ರಸ್ತೆ, ಚಾಮರಾಜ ಜೋಡಿ ರಸ್ತೆ, ಕುವೆಂಪು ನಗರ ಜೋಡಿ ರಸ್ತೆ ಮೊದಲಾದ ಹೆಸರುಗಳಿವೆ. ನಮ್ಮ ಟಾಂಗಾಗಳು ಪಕ್ಕದಲ್ಲಿ ಹೊರಟವು. ಮಕ್ಕಳು ಹೋ ಅರಮನೆ ಎಂದರು. ಅರಮನೆಯ ಉತ್ತರದ್ವಾರ ಬಂದಿತು. ಅಲ್ಲಿ ಒಂದು ವೃತ್ತ ಇದೆ. ವೃತ್ತದ ಮಧ್ಯದಲ್ಲಿ ಒಂದು ಪ್ರತಿಮೆ



ಅರಮನೆಯ ಉತ್ತರ ದ್ವಾರದಲ್ಲಿರುವ ನಾಲ್ವಡಿ ಕೃಷ್ಣರ ಪ್ರತಿಮೆ

ಇದೆ. ಅದು ಕೃಷ್ಣರಾಜ ಒಡೆಯರ ಪ್ರತಿಮೆ. ಅದಕ್ಕೆ ಕಟ್ಟಿರುವ ಮಂಟಪ ಸುಂದರವಾಗಿದೆ. ಪ್ರತಿಮೆ ನಿಂತ ಭಂಗಿಯಲ್ಲಿದೆ. ಸ್ವಲ್ಪ ಮುಂದೆ ಬಂದೆವು. ಮತ್ತೊಂದು ವೃತ್ತ ಸಿಕ್ಕಿತು. ವೃತ್ತದ ಎಡಕ್ಕೆ ನಗರ ಬಸ್ ನಿಲ್ದಾಣವಿತ್ತು. ಈ ವೃತ್ತದಲ್ಲೂ ಸುಂದರವಾದ ಪ್ರತಿಮೆ ಇದೆ. ಸುಂದರವಾದ ಮಂಟಪ ಇದೆ. ಅದು ಚಾಮರಾಜ ಒಡೆಯರ ಪ್ರತಿಮೆ. ರಸ್ತೆಗಳು ದೊಡ್ಡದಾಗಿದ್ದರೂ ಜನರು

ಚಿನ್ನದ ಅಂಬಾರಿಯನ್ನು ಹೊತ್ತ ಆನೆ

ತುಂಬಿದ್ದರು. ಆಧುನಿಕ ನಗರಗಳ ಜಾಡಿನಲ್ಲೇ ಮೈಸೂರು ನಗರವೂ ಇದೆ. ಈಗ್ಗೆ ನೂರು ವರ್ಷಗಳ ಹಿಂದೆ ಮೈಸೂರಿನ ಜನ ಸಂಖ್ಯೆ ಅರವತ್ತು ಸಾವಿರ ಇತ್ತಂತೆ. ಈಗ ಅದು ಐದು ಲಕ್ಷವನ್ನೂ ಮೀರಿದೆ. ನಮ್ಮ ಟಾಂಗಾಗಳನ್ನು ನೇರವಾಗಿ ಚಿಕ್ಕಮ್ಮನ ಮನೆಗೆ ಹೊಡೆಸಿದೆ.

ಮಾರನೆದಿನ ಬೆಳಗ್ಗೆ ಹವ ತಂಪಾಗಿತ್ತು. ಸಮುದ್ರ ಮಟ್ಟದಿಂದ ಮೈಸೂರು ಏಳುನೂರಅರವತ್ಮೂರು ಮೀಟರ್ ಎತ್ತರ ಇದೆಯಂತೆ. ಆದ್ದರಿಂದ ಮಾರ್ಚ್, ಏಪ್ರಿಲ್, ಮೇ ತಿಂಗಳೆಲ್ಲ ಹವೆ ಸ್ವಲ್ಪ ಬಿಸಿ ಇರುತ್ತದೆ. ಉಳಿದಂತೆ ತಂಪಾಗಿರುತ್ತದೆ. ಬೆಳಗಿನ ಉಪಹಾರ ಮುಗಿಯಿತು. ಮಕ್ಕಳು, ಹೆಂಗಸರು ಬೊಂಬೆಗಳ ಅಲಂಕಾರ ಮಾಡುತ್ತಿದ್ದರು. ಅಲ್ಲಿಗೆ ನನ್ನ ಚಿಕ್ಕಪ್ಪನ ತಂದೆ ಬಂದರು. ಹಿಂದೆ ಈ ಬೊಂಬೆಗಳ ಪ್ರದರ್ಶನ ವೈಭವದಿಂದ ಇರುತ್ತಿತ್ತು ಎಂದರು. ಮಕ್ಕಳು ಅವರನ್ನು ಮುತ್ತಿಕೊಂಡವು. ''ಅಜ್ಜ ಅಜ್ಜ ನಿಮ್ಮ ಕಾಲದಲ್ಲಿ ಮೈಸೂರು ದಸರಾ ಹೇಗಿತ್ತು? ಹೇಳಿ ಹೇಳಿ'' ಎಂದರು. ''ಇದು ಐವತ್ತು ವರ್ಷದ ಹಿಂದಿನ ಮಾತು. ಆಗ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲ.'' ಎಂದು ಅಜ್ಜ ತಮ್ಮ ನೆನಪುಗಳನ್ನು ಕೆದಕಿದರು. ಮಕ್ಕಳು ಬೊಂಬೆ ಜೋಡಿಸುವುದನ್ನು ಬಿಟ್ಟರು. ಅಜ್ಜನಿಗೆ ಹತ್ತಿರ ಸರಿದು ಕುಳಿತರು. ''ಹಿಂದೆ ವಿಜಯನಗರದಲ್ಲಿ ಅರಸರಿದ್ದರು. ಅವರು ಅದ್ದೂರಿಯಾಗಿ ದಸರಾಹಬ್ಬ ಆಚರಿಸುತ್ತಿದ್ದರು. ಅವರನ್ನೇ ಮೈಸೂರು ಅರಸರು ಅನುಸರಿಸಿದರು. ದಸರೆಯ ಮೊದಲ ದಿನ ಮಹಾರಾಜರ ದರ್ಬಾರು ಇರುತ್ತಿತ್ತು. ಆ ದಿನ ಅರಮನೆಯ ದರ್ಬಾರ್ ಹಾಲಿನಲ್ಲಿ ಸಭೆ. ರತ್ನ ಸಿಂಹಾಸನದ ಮೇಲೆ ರಾಜರು ಕೂಡುತ್ತಿದ್ದರು. ಆಗ ಇಪ್ಪತ್ತೊಂದು ಕುಶಾಲು ತೋಪುಗಳನ್ನು ಹಾರಿಸುತ್ತಿದ್ದರು. ಅರಮನೆಯ ಮುಂದಿನ ಅಂಗಳದಲ್ಲಿ ಸೈನಿಕರ ಕವಾಯತು ಇರುತ್ತಿತ್ತು. ಅಧಿಕಾರಿಗಳು, ಪುರಪ್ರಮುಖರು ನಜರನ್ನು ಒಪ್ಪಿಸುತ್ತಿದ್ದರು. ಎಂಟು ದಿನ ಇದೇ ರೀತಿ ಇರುತ್ತಿತ್ತು. ಒಂಭತ್ತನೆಯ ದಿನ ಪಟ್ಟದ ಕತ್ತಿ, ಆನೆ, ಕುದುರೆಗಳನ್ನು ಪೂಜಿಸುತ್ತಿದ್ದರು. ಸಂಜೆ ಇಂಗ್ಲಿಷ್ ಅಧಿಕಾರಿಗಳಿಗೆ ವಿಶೇಷ ದರ್ಬಾರು ಇರುತ್ತಿತ್ತು.

ಹತ್ತನೆಯ ದಿನ ಬೆಳಿಗ್ಗೆ ಪಟ್ಟದ ಆನೆ, ಕತ್ತಿ, ಕುದುರೆಗಳು ಬನ್ನಿ ಮಂಟಪಕ್ಕೆ ಹೊರಡುತ್ತಿದ್ದವು. ಸಂಜೆ ಜಂಬೂಸವಾರಿ. ಆನೆಯ ಮೇಲೆ ಚಿನ್ನದ ಅಂಬಾರಿ ಇಡುತ್ತಿದ್ದರು. ಅದರಲ್ಲಿ ರಾಜರು ಕೂಡುತ್ತಿದ್ದರು. ಮೈಸೂರು ನಗರದ ರಾಜಬೀದಿಗಳಲ್ಲಿ ಜಂಬೂಸವಾರಿ ಮಾಡುತ್ತಿದ್ದರು. ಇದನ್ನು ನೋಡಲು ದೇಶ ವಿದೇಶಗಳಿಂದ ಜನ ಬರುತ್ತಿದ್ದರು. ಜಂಬೂಸವಾರಿ ಬನ್ನಿಮಂಟಪಕ್ಕೆ ತಲುಪುತ್ತಿತ್ತು. ಅಲ್ಲಿ ವಿಶಾಲವಾದ ಅಂಗಳ ಇದೆ. ರಾಜರು ಅಂಬಾರಿಯಿಂದ ಇಳಿಯುತ್ತಿದ್ದರು. ಕುದುರೆಯ ಮೇಲೆ ಕೂಡುತ್ತಿದ್ದರು. ಸೈನ್ಯದ ವಂದನೆ ಪಡೆಯುತ್ತಿದ್ದರು. ಅಲ್ಲಿಗೆ ದಸರಾ ಮುಗಿಯುತ್ತಿತ್ತು.''

ನನ್ನ ಚಿಕ್ಕಪ್ಪ ಮಧ್ಯೆ ಬಾಯಿ ಹಾಕಿದರು. ''ಈಗ ಸರ್ಕಾರವೇ ಜಂಬೂಸವಾರಿ ಉತ್ಸವ ನಡೆಸುತ್ತಿದೆ. ಅಂಬಾರಿಯಲ್ಲಿ ಈಗ ರಾಜರಿರುವುದಿಲ್ಲ. ಚಾಮುಂಡೇಶ್ವರಿ ವಿಗ್ರಹ ಇರುತ್ತದೆ. ಮೆರವಣಿಗೆಯಲ್ಲಿ ದೇಶದ ಇತಿಹಾಸ, ಸಂಸ್ಕೃತಿ ಬೆಳವಣಿಗೆಯನ್ನು ಸೂಚಿಸುವ ಸ್ಥಬ್ದ ಚಿತ್ರಗಳು ಇರುತ್ತವೆ. ಬೇರೆ ಬೇರೆ ಜಿಲ್ಲೆಯ, ಬೇರೆಬೇರೆ ಸರಕಾರಿ ಇಲಾಖೆಗಳ ಸ್ಥಬ್ದ ಚಿತ್ರಗಳು ಮೆರವಣಿಗೆಯಲ್ಲಿ ಇರುತ್ತವೆ. ಜಾನಪದ ಕುಣಿತಗಳು, ಸ್ವಯಂ ಸೇವಕರು, ಪೋಲೀಸ್ ವಾದ್ಯವೃಂದ ಇವುಗಳು ಮೆರವಣಿಗೆಯಲ್ಲಿ ಇರುತ್ತವೆ'' ಎಂದರು. ದಸರಾ ಸಮಯದಲ್ಲಿ ಕವಿಗೋಷ್ಠಿ ಇರುತ್ತದೆ. ಪ್ರಸಿದ್ಧ ಸಂಗೀತಗಾರರು ಹಾಡುತ್ತಾರೆ. ಈ ಕಾರ್ಯ ಕ್ರಮ ಅರಮನೆಯ ಮುಂದೆ ಇರುತ್ತದೆ ಎಂದರು.

ನನ್ನ ಚಿಕ್ಕಪ್ಪ ಕಾಲೇಜಿನಲ್ಲಿ ಪ್ರೊಫೆಸರ್. ಅವರು ಕೆಲಸದ ನಿಮಿತ್ತ ಮಾನಸ ಗಂಗೋತ್ರಿಗೆ ಹೊರಟರು. ನಾನೂ ಅವರ ಜೊತೆ ಹೊರಟೆ. ಮಾನಸ ಗಂಗೋತ್ರಿ ನೂರಾರು ಎಕರೆಗಳ ಆವರಣ. ಇದಕ್ಕೆ ಕುವೆಂಪು ಅವರು 'ಮಾನಸಗಂಗೋತ್ರಿ' ಎಂಬ ಹೆಸರು ಕೊಟ್ಟರು. ಇಲ್ಲಿ ಎಂ.ಎ., ಎಂ.ಎಸ್ಸಿ., ತರಗತಿಗಳು ನಡೆಯುತ್ತವೆ. ಮೈಸೂರು ವಿಶ್ವವಿದ್ಯಾಲಯ ಇದನ್ನು ನಡೆಸುತ್ತಿದೆ. ಇಲ್ಲಿ ಮೂವತ್ತು ವಿಷಯಗಳ ವಿಭಾಗಗಳಿವೆ. ವಿಭಾಗಗಳು ದೊಡ್ಡ ಕಟ್ಟಡವನ್ನು ಹೊಂದಿವೆ. ಇಲ್ಲಿ ಮಾನವಿಕ, ವಾಣಿಜ್ಯ, ವಿಜ್ಞಾನ ವಿಷಯಗಳನ್ನು


ಬೋಧಿಸುತ್ತಾರೆ. ಇಲ್ಲಿ ಒಂದು ದೊಡ್ಡ ಲೈಬ್ರರಿ ಇದೆ. ಇದರಲ್ಲಿ ಸುಮಾರು ನಾಲ್ಕು ಲಕ್ಷ ಗ್ರಂಥಗಳಿವೆ. ಲೈಬ್ರರಿಗೆ ಎರಡುಸಾವಿರದ ಇನ್ನೂರು ಬಗೆಯ ಪತ್ರಿಕೆಗಳು ಬರುತ್ತವೆ. ಮಾನಸಗಂಗೋತ್ರಿಯ ಮಧ್ಯಭಾಗದಲ್ಲಿ ಜಯಲಕ್ಷ್ಮಿ ಬಂಗಲೆ ಇದೆ. ಇದರಲ್ಲಿ ಜಾನಪದ ವಸ್ತುಸಂಗ್ರಹಾಲಯವಿದೆ. ಇಲ್ಲಿ ಗ್ರಾಮೀಣ ಜನರು ಬಳಸುತ್ತಿದ್ದ ಅನೇಕ ಬಗೆಯ ವಸ್ತುಗಳಿವೆ. ದಿನಬಳಕೆಯ ವಸ್ತುಗಳು, ವ್ಯವಸಾಯ ಸಾಧನಗಳು, ಮರದ ಕೆತ್ತನೆಗಳು, ಚಮ್ಮಾರ, ಕ್ಷೌರಿಕ, ಬೆಸ್ತ, ಬಡಗಿ, ಮೊದಲಾದವರು ಬಳಸುವ ವಸ್ತುಗಳು, ಯಕ್ಷಗಾನದ ವೇಷಭೂಷಣಗಳು, ಸಣ್ಣ ಮತ್ತು ದೊಡ್ಡ ಬೊಂಬೆಗಳು, ಮಕ್ಕಳ ಆಟಿಕೆಗಳು, ಲೋಹದ ಸಾಧನಗಳು, ಪೂಜಾಸಾಮಗ್ರಿಗಳು, ವಸತಿ ಮಾದರಿಗಳು, ಜನಪದ ಚಿತ್ರಕಲೆಗಳು, ಉಡುಗೆ ತೊಡುಗೆಗಳು, ಆಯುಧಗಳು, ಗರಡಿಯ ಸಾಧನಗಳು, ಹೆಣಿಗೆಯ ಸಾಧನಗಳು, ಮರದ ಪ್ರತಿಮೆಗಳು, ರಥಗಳು ಹೀಗೆ ಬಗೆ ಬಗೆಯ ಆರುಸಾವಿರ ವಸ್ತುಗಳು ಇವೆ. ಇದನ್ನು ಸಾವಿರದ ಒಂಬೈನೂರಾ ಅರವತ್ತೆಂಟರಲ್ಲಿ ಸ್ಥಾಪಿಸಿದರಂತೆ. ಈಗ ಇದು ಭಾರತದ ಅತಿದೊಡ್ಡ ಜಾನಪದ ಮ್ಯೂಸಿಯಂಗಳಲ್ಲಿ ಒಂದಾಗಿದೆ. ಇದರ ಪಕ್ಕದಲ್ಲೇ ಕವಿಗಳಿಗೆ ಸಂಬಂಧಿಸಿದ ಮ್ಯೂಸಿಯಂ ಇದೆ.

ಗಂಗೋತ್ರಿಯ ಆವರಣದಲ್ಲಿ 'ಅಖಿಲಭಾರತ ವಾಕ್ ಶ್ರವಣ ಸಂಸ್ಥೆ' ಇದೆ. ಇಲ್ಲಿ ಕಿವುಡು ಮತ್ತು ಮೂಗರ ಸಮಸ್ಯೆಯನ್ನು ಪರಿಹರಿಸುತ್ತಾರೆ. ಆ ಬಗ್ಗೆ ತರಬೇತಿ ಸಂಶೋಧನೆ ಇಲ್ಲಿ ನಡೆಯುತ್ತದೆ. ಭಾರತೀಯ ಭಾಷೆಗಳ ಸಂಸ್ಥೆಯೂ ಇಲ್ಲಿದೆ. ಇದರಲ್ಲಿ ಆಡುಮಾತಿನ ಬಗ್ಗೆ ಸಂಶೋಧನೆ ನಡೆಯುತ್ತದೆ. ದಕ್ಷಿಣ ಭಾರತದ ಭಾಷೆಗಳನ್ನು ಇವರು ಅಭ್ಯಾಸಮಾಡುತ್ತಾರೆ. ಡಿಪ್ಲೊಮವನ್ನೂ ಕೊಡುತ್ತಾರೆ. ಗಂಗೋತ್ರಿಯ ಪಶ್ಚಿಮ ದಿಕ್ಕಿನಲ್ಲಿ ಪ್ರಾದೇಶಿಕ ಕಾಲೇಜು, ಜಯಚಾಮರಾಜೇಂದ್ರ ಇಂಜನಿಯರಿಂಗ್ ಕಾಲೇಜುಗಳು ಇವೆ. ಗಂಗೋತ್ರಿಯ ಉತ್ತರಕ್ಕೆ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಇದೆ. ಈ ಸಂಸ್ಥೆಯನ್ನು ಮೈಸೂರು ವಿಶ್ವವಿದ್ಯಾಲಯ ನಡೆಸುತ್ತದೆ. ಕೆಲವರಿಗೆ ಕಾಲೇಜು ಓದಲು ಅನುಕೂಲ ಇರುವುದಿಲ್ಲ. ಅಂಥವರು ಮನೆಯಲ್ಲೇ ಕುಳಿತು ಓದಬಹುದು.

ಅಂಚೆಮೂಲಕ ಈ ಸಂಸ್ಥೆ ಪಾಠಗಳನ್ನು ಕಳುಹಿಸುತ್ತದೆ. ಈ ಪಾಠಗಳನ್ನು ಓದಿ ಬಿ.ಎ., ಎಂ.ಎ ಪರೀಕ್ಷೆಗೆ ಕೂರಬಹುದು.

ಈ ಸಂಸ್ಥೆಯ ಪಕ್ಕದಲ್ಲಿ ಪ್ರಸಾರಾಂಗ ಕಟ್ಟಡ ಇದೆ. ಪ್ರಸಾರಾಂಗದಲ್ಲಿ ಒಂದು ಮುದ್ರಣ ಶಾಲೆಯೂ ಇದೆ. ಇದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದೆ. ನಾಲ್ವಡಿ ಕೃಷ್ಣರಾಜ ಒಡೆಯರು ಸಾಮಾನ್ಯ ಜನರಿಗೆ ಜ್ಞಾನ ಪ್ರಸಾರ ಬೇಕು ಎಂದುಕೊಂಡರು. ಅದಕ್ಕೆ ಪ್ರಚಾರ ಉಪನ್ಯಾಸ ಮಾಡಿಸಿದರು. ಬೇರೆ ಬೇರೆ ಊರುಗಳಲ್ಲಿ ಭಾಷಣಗಳಾದವು. ಅದಕ್ಕಾಗಿ ಈ ಪ್ರಸಾರಾಂಗ ಹುಟ್ಟಿಕೊಂಡಿತು. ಇದು ಭಾಷಣಗಳನ್ನು ಪುಸ್ತಕರೂಪದಲ್ಲಿ ತಂದಿತು. ತೀರಾ ಕಡಮೆ ಬೆಲೆಗೆ ಮಾರಿತು. ಪ್ರಸಾರಾಂಗವು ಪ್ರಬುದ್ಧ ಕರ್ನಾಟಕ, ಮಾನವಿಕ ಕರ್ನಾಟಕ, ವಿಜ್ಞಾನ ಕರ್ನಾಟಕ ಪತ್ರಿಕೆಗಳನ್ನು ಪ್ರಕಟಿಸುತ್ತದೆ. ಇವು ಮೂರು ತಿಂಗಳಿಗೊಮ್ಮೆ ಪ್ರಕಟವಾಗುತ್ತವೆ. ''ಪ್ರೀಮಿಯರ್ ಸ್ಟುಡಿಯೋ, ಚಲನಚಿತ್ರ ತಯಾರು ಮಾಡುವ ಜಾಗ. ಇದು ಸಾವಿರದ ಒಂಬೈನೂರಾ ಐವತ್ತನಾಲ್ಕರಲ್ಲಿ ಪ್ರಾರಂಭವಾಯಿತು. ಗಂಗೋತ್ರಿಯ ವಾಯುವ್ಯಮೂಲೆಯ ಆಚೆ ಇದೆ'' ಎಂದು ದೂರದಲ್ಲಿ ತೋರಿಸಿದರು. ನನ್ನ ಚಿಕ್ಕಪ್ಪನಿಗೆ ವಿಶ್ವವಿದ್ಯಾನಿಲಯದ ಕಛೇರಿಯಲ್ಲಿ ಕೆಲಸವಿತ್ತು. ನಾವು ನಡೆದುಕೊಂಡೇ ಹೊರಟೆವು. ಗಂಗೋತ್ರಿಯನ್ನು ದಾಟುವುದಕ್ಕೆ ಮುಂಚೆ ಬಯಲು ಮಂದಿರ ಕಂಡಿತು. ಬಲಕ್ಕೆ ಗಾಂಧಿಮಂದಿರ ಇದೆ. ಎಡಕ್ಕೆ ಅಕೆಡೆಮಿಕ್ ಸ್ಟಾಫ್ ಕಾಲೇಜು ಇದೆ. ಸ್ಟಾಫ್ ಕಾಲೇಜಿನಲ್ಲಿ ಕಾಲೇಜು ಶಿಕ್ಷಕರಿಗೆ ಕಮ್ಮಟಗಳನ್ನು ನಡೆಸುತ್ತಾರೆ. ನಾವು ಕುಕ್ಕರಹಳ್ಳಿ ಕೆರೆಯ ಏರಿ ಮೇಲೆ ನಡೆದವು. ಕೆರೆಯಲ್ಲಿ ನೀರಿತ್ತು. ಗಾಳಿ ತಣ್ಣಗೆ ಬೀಸುತ್ತಿತ್ತು. ಕೆರೆಯ ಪಕ್ಕದಲ್ಲಿ ವಿಶ್ವವಿದ್ಯಾನಿಯದ ಕಛೇರಿ ಕಾಣುತ್ತಿತ್ತು. ನೀರಿನಲ್ಲಿ ಆ ಬಿಳಿಯ ಸೌಧ ತಲೆಕೆಳಗಾಗಿತ್ತು. ನಾವು ಸೌಧದ ಬಳಿ ಬಂದೆವು. ಇದನ್ನು ಬ್ರಿಟಿಷರ ಶೈಲಿಯಲ್ಲಿ ಕಟ್ಟಿದ್ದಾರೆ. ನೋಡಲು ಆಕರ್ಷಕವಾಗಿದೆ. ಇದನ್ನು 'ಕ್ರಾಫರ್ಡ್‌ಹಾಲ್' ಎಂದು ಕರೆಯುತ್ತಾರೆ. ಇದರಲ್ಲಿ ಮೈಸೂರು ವಿಶ್ವವಿದ್ಯಾಲಯದ ಆಡಳಿತ ನಡೆಯುತ್ತದೆ.

ಮೈಸೂರು ವಿಶ್ವವಿದ್ಯಾಲಯ ಸಾವಿರದ ಒಂಬೈನೂರಾ ಅರವತ್ತೊಂದರಲ್ಲಿ



ವಿಶ್ವವಿದ್ಯಾನಿಲಯದ ಕಾರ್ಯಸೌಧ

ಸ್ಥಾಪಿತವಾಯಿತು. ನಾಲ್ವಡಿ ಕೃಷ್ಣರಾಜರು ಮತ್ತು ವಿಶ್ವೇಶ್ವರಯ್ಯನವರು ಇದಕ್ಕೆ ಕಾರಣರು. ಮೈಸೂರು ವಿಶ್ವವಿದ್ಯಾನಿಲಯ ಹದಿನೆಂಟು ಬಗೆಯ ಪದವಿಗಳನ್ನು ನೀಡುತ್ತದೆ. ಇಪ್ಪತ್ತೇಳು ಬಗೆಯ ಸ್ನಾತಕೋತ್ತರ ಪದವಿಗಳನ್ನು ನೀಡುತ್ತದೆ.

ಕಛೇರಿಯಲ್ಲಿ ಕೆಲಸ ಮುಗಿಸಿಕೊಂಡು ನಾವು ಹೊರಬಂದೆವು. ಸ್ವಲ್ಪ ದೂರದಲ್ಲಿ ಬಲಭಾಗದಲ್ಲಿ ಒಂದು ಕಟ್ಟಡ ಕಂಡಿತು. ಅದು ಪ್ರಾಚ್ಯ ಅಧ್ಯಯನಗಳ ಸಂಸ್ಥೆ. ಅದರ ಒಳಗೆ ಪುರಾತನ ಹಸ್ತಪ್ರತಿಗಳು, ಓಲೆಗರಿಗಳು ಇವೆ. ಅವುಗಳ ಸಂಖ್ಯೆ ಅರವತ್ತು ಸಾವಿರಕ್ಕೆ ಮಿಕ್ಕಿವೆ. ವೇದ, ಉಪನಿಷತ್ತು, ಖಗೋಳಶಾಸ್ತ್ರ, ಜ್ಯೋತಿಷ್ಯ, ಆಯುರ್ವೇದ, ಯುನಾನಿವೈದ್ಯ ಮೊದಲಾದ ಹಸ್ತಪ್ರತಿಗಳಿವೆ. ಕ್ರಿಸ್ತ ಪೂರ್ವ ಮೂರನೇ ಶತಮಾನದ ಬರಹ ಇದೆ. ಮೂರು ಅಡಿ ಉದ್ದದ ತಾಳೆಗರಿ ಗ್ರಂಥ ಇದೆ. ಎರಡು ಅಂಗುಲ ಉದ್ದ ಒಂದು ಅಂಗುಲ ಅಗಲದ ತಾಳೆಗ್ರಂಥವೂ ಇದೆ. ಈ ಸಂಸ್ಥೆಯನ್ನು ಸಾವಿರದ ಎಂಟುನೂರಾ ತೊಂಬತ್ತೊಂದರಲ್ಲಿ ಚಾಮರಾಜ ಒಡೆಯರು ಸ್ಥಾಪಿಸಿದರು ಎಂದು ನನ್ನ ಚಿಕ್ಕಪ್ಪ

ಹೇಳಿದರು. ಅದಕ್ಕಿಂತ ಮುಂದೆ ಎರಡು ಕಟ್ಟಡಗಳು ಕಾಣುತ್ತಿದ್ದವು. ಅವು ಯುವರಾಜ ಮತ್ತು ಮಹಾರಾಜ ಕಾಲೇಜುಗಳು. ಮಹಾರಾಜ ಕಾಲೇಜು ಸಾವಿರದ ಎಂಟುನೂರಾ ಐವತ್ತಮೂರರಲ್ಲಿ ಸ್ಥಾಪಿತವಾಯಿತು. ಅದು ಕರ್ನಾಟಕದ ಅತ್ಯಂತ ಹಳೆಯ ಕಾಲೇಜು ಎಂದರು.

ನಾವು ಕ್ರಾಫರ್ಡ್ ಭವನದಿಂದ ಎಡಭಾಗಕ್ಕೆ ಹೊರಟೆವು. ಅಲ್ಲಿ ಒಂದು ಕಟ್ಟಡ. ಅದಕ್ಕೆ ಎತ್ತರವಾದ ಗೋಪುರ. ಗೋಪುರದ ಮೇಲೆ ಚಿನ್ನದ ಬಣ್ಣದ ಕಳಸ. ಅದು ಜಿಲ್ಲಾಧಿಕಾರಿಗಳ ಕಛೇರಿ. ಕಟ್ಟಡ ಅರಮನೆಯಂತೆ ಕಾಣುತ್ತದೆ. ಇದಕ್ಕೆ ಅಠಾರ ಕಛೇರಿ ಎಂದೂ ಕರೆಯುತ್ತಾರೆ. ಇದನ್ನು ಸಾವಿರದ ಎಂಟುನೂರಾ ತೊಂಬತ್ತ ಐದರಲ್ಲಿ ಕಟ್ಟಿದರಂತೆ. ಕಟ್ಟಡದ ಎದುರು ಒಂದು ಪ್ರತಿಮೆ ಇದೆ. ಅದು 'ಜೇಮ್ಸ್ ಗೋರ್ಡನ್' ಎಂಬುವವನ ಪ್ರತಿಮೆ. ಇವನು ಬ್ರಿಟಿಷ್ ರೆಸಿಡೆಂಟ್ ಆಗಿದ್ದನಂತೆ. ಈ ಭವನದ ಮುಂದೆ ಎಡಭಾಗಕ್ಕೆ ಮಹಾರಾಣಿ ಕಾಲೇಜು ಇದೆ. ಇಲ್ಲಿ ಹೆಣ್ಣು ಮಕ್ಕಳಿಗೆ ಮಾತ್ರ ಪ್ರವೇಶ. ಇದು ಕೂಡಾ ಕರ್ನಾಟಕದ ಹಳೆಯ ಕಾಲೇಜುಗಳಲ್ಲಿ ಒಂದು.

ನಾನು ಮೈಸೂರಿನಲ್ಲಿ ಮತ್ತೆ ಯಾವ ಯಾವ ಕಾಲೇಜುಗಳು ಇವೆ ಎಂದೆ. ಚಿಕ್ಕಪ್ಪ ಹೇಳಿದರು, ಎರಡು ವೈದ್ಯಕೀಯ ಕಾಲೇಜುಗಳು, ಒಂದು ಆಯುರ್ವೇದ ಮತ್ತು ಯುನಾನಿ ಕಾಲೇಜು, ಒಂದು ದಂತ ವಿಜ್ಞಾನ ಕಾಲೇಜು, ಒಂದು ಔಷಧ ಶಾಸ್ತ್ರ ಕಾಲೇಜು, ಎರಡು ಇಂಜನಿಯರಿಂಗ್, ಮೂರು ಕಾನೂನು, ಆರು ಶಿಕ್ಷಣ, ಎರಡು ಲಲಿತಕಲಾ ಕಾಲೇಜುಗಳು ಇವೆ. ಒಂದು ವೃತ್ತಿಶಿಕ್ಷಣ ಶಾಲೆ ಇದೆ ಎಂದರು. 'ಶ್ರೀಮಾನ್ ಮಹಾರಾಜ ಸಂಸ್ಕೃತ ಮಹಾಪಾಠಶಾಲೆ' ಇದೆ. ಇಲ್ಲಿ ವೇದ, ಆಗಮ, ಸಾಹಿತ್ಯಗಳನ್ನು ಕಲಿಸುತ್ತಾರೆ. ಸಾವಿರದ ಒಂಬೈನೂರಾ ಹದಿಮೂರರಲ್ಲಿ ಪ್ರಾರಂಭವಾದ ಜಯಚಾಮರಾಜೇಂದ್ರ ವೃತ್ತಿಶಿಕ್ಷಣ ಶಾಲೆ ಇದೆ. ಚಿತ್ರಕಲೆ, ಲೋಹಕೆಲಸ, ಗಂಧ, ದಂತದ ಕೆತ್ತನೆ, ಶಿಲ್ಪ, ಇವುಗಳ ಬಗ್ಗೆ ತರಬೇತಿ ಕೊಡುತ್ತಾರೆ: 'ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ'ಯ ಪ್ರಧಾನ ಕಛೇರಿ ಮೈಸೂರಿನಲ್ಲಿದೆ. ಇವರು ಅಕ್ಷರ ಪ್ರಚಾರ, ನವಸಾಕ್ಷರರಿಗೆ ಸಾಹಿತ್ಯ ರಚನೆ,

ಗ್ರಾಮ ಗ್ರಂಥಭಂಡಾರ ಸ್ಥಾಪನೆ ಮುಂತಾದ ಕೆಲಸಗಳನ್ನು ಮಾಡುತ್ತಾರೆ ಎಂದು ಹೇಳಿದರು.


ನಾವು ಮನೆಗೆ ಬಂದಾಗ ಹೊತ್ತು ಮೀರಿ ಹೋಗಿತ್ತು. ಎಲ್ಲರೂ ಊಟ ಮಾಡಿ ಹಾಸಿಗೆಯಲ್ಲಿ ಉರುಳಾಡುತ್ತಿದ್ದರು. ನಾವು ಊಟದ ಶಾಸ್ತ್ರ ಮಾಡಿ ಅಡ್ಡಾದೆವು.

ನಮ್ಮ ಮನೆಗೆ ಸ್ವಲ್ಪ ದೂರದಲ್ಲಿ 'ಐಡಿಯಲ್ ಜಾವಾ' ಫ್ಯಾಕ್ಟರಿ ಇದೆ. ಅಲ್ಲಿ ಮೋಟಾರುಸೈಕಲ್ಲುಗಳನ್ನು ತಯಾರಿಸುತ್ತಾರೆ. ನಾನು ಸಂಜೆ ಅಲ್ಲಿಗೆ ಹೋಗೋಣ ಎಂದೆ. ಚಿಕ್ಕಪ್ಪ ಸಮ್ಮತಿಸಿದರು. ಗೃಹದೇವತೆಯರ ಆಣತಿಪಡೆಯಲು ಹೇಳಿದರು. ನಾನು ಮೆಲ್ಲಗೆ ಜನಾನಾಕ್ಕೆ ನುಸುಳಿದೆ. ನನ್ನ ಅಹವಾಲನ್ನು ಇಟ್ಟೆ. ಮೈಸೂರಿನಲ್ಲಿ ನೋಡಬೇಕಾದ ಜಾಗಗಳಿವೆ. ಅವಕ್ಕೆ ಇನ್ನೂ ಹೋಗಿಲ್ಲ, ಫ್ಯಾಕ್ಟರಿಗಳನ್ನು ನೋಡುವ ದುರ್ಬುದ್ಧಿಯೇಕೆ? 'ಕೆ.ಆರ್.ಎಸ್‌ಗೆ ಹೋಗೋಣ ಹೊರಡಿ'' ಎಂದು ಹುಕುಂ ಬಂದಿತು. ಚಿಕ್ಕಪ್ಪ ಪಕ್ಷ ಬದಲಿಸಿದರು. ಹೌದು ಮೈಸೂರಿನಲ್ಲಿ ಕೃಷ್ಣರಾಜೇಂದ್ರ ಬಟ್ಟೆಗಿರಣಿ ಇದೆ, ರೇಷ್ಮೆ ನೂಲು ಮತ್ತು ಬಟ್ಟೆಯ ಗಿರಣಿ ಇದೆ. ಗಂಧದ ಎಣ್ಣೆ ಕಾರ್ಖಾನೆ ಇದೆ. ವಿಕ್ರಾಂತ್ ಟೈರು ಕಾರ್ಖಾನೆ ಇದೆ. 'ಭಾರತ್ ಅರ್ತ್ ಮೂವರ್ಸ್' ಇದೆ. ಮಹೇಂದ್ರ ಮತ್ತು ಮಹೇಂದ್ರ, ಕಿರ್ಲೋಸ್ಕರ್ ಕಾರ್ಖಾನೆಗಳಿವೆ. ಪ್ರಸಿದ್ಧವಾದ ಮೈಸೂರಿನ ಅಗರಬತ್ತಿ ಕಾರ್ಖಾನೆಗಳಿವೆ. ಅರಗು ಮತ್ತು ಬಣ್ಣದ ಕಾರ್ಖಾನೆಗಳಿವೆ. ಆದ್ದರಿಂದ ಎಲ್ಲವನ್ನೂ ನೋಡಲು ಈಗ ಸಾಧ್ಯವಿಲ್ಲ. ಕೃಷ್ಣರಾಜಸಾಗರವಾದರೆ ಒಂದೇ ಇದೆ. ಹೋಗೋಣ ನಡೆಯಿರಿ ಎಂದರು. ನನ್ನ ಹೆಂಡತಿ ಮೈಸೂರು ಸಿಲ್ಕ್ ತುಂಬಾ ಪ್ರಸಿದ್ಧಿ ಅದರ ಅಂಗಡಿ ಎಲ್ಲಿದೆ ಎಂದಳು. ನಾನು ಅದನ್ನು ಕೇಳಿಸಿಕೊಳ್ಳಲಿಲ್ಲ. ಎಲ್ಲಾ ಬೇಗ ರೆಡಿಯಾಗಿ. ಟ್ಯಾಕ್ಸಿ ಬರುತ್ತದೆ ಎಂದು ಹೇಳಿ ಟ್ಯಾಕ್ಸಿ ವ್ಯವಸ್ಥೆ ಮಾಡಲು ಹೊರಬಂದೆ.

ನಾವು ಟ್ಯಾಕ್ಸಿಯಲ್ಲಿ ಕೃಷ್ಣರಾಜಸಾಗರಕ್ಕೆ ಬಂದೆವು. ಕನ್ನಂಬಾಡಿಯ ಬಳಿ

ಕಾವೇರಿ ನದಿಗೆ ಕಟ್ಟೆಕಟ್ಟಿದ್ದಾರೆ. ಆದ್ದರಿಂದ ಇದನ್ನು ಕನ್ನಂಬಾಡಿ ಕಟ್ಟೆ ಎಂದೂ ಕರೆಯುತ್ತಾರೆ. ಇದನ್ನು ವಿಶ್ವೇಶ್ವರಯ್ಯನವರ ಮುಂದಾಳುತನದಲ್ಲಿ ಕಟ್ಟಿದ್ದಾರೆ. ಜಲಾಶಯದಲ್ಲಿ ನೀರು ನೂರಇಪ್ಪತ್ನಾಲ್ಕು ಅಡಿ ಎತ್ತರ ನಿಲ್ಲುತ್ತದೆ. ನೀರನ್ನು ಹೊರಬಿಡಲು ನಡುಹೊಳೆಯಲ್ಲಿ ಎಂಟು ಬಾಗಿಲುಗಳಿವೆ. ಕಟ್ಟೆಯ ಐವತ್ತು ಅಡಿ ಮಟ್ಟದಲ್ಲಿ ಮತ್ತೆ ಮೂರು ಬಾಗಿಲುಗಳಿವೆ. ಕಟ್ಟೆಯ ಎಂಬತ್ತು ಅಡಿ ಮಟ್ಟದಲ್ಲಿ ಹದಿನಾರು ಬಾಗಿಲುಗಳಿವೆ, ನೂರಮೂರು ಅಡಿ ಮಟ್ಟದಲ್ಲಿ ನಲ್ವತ್ತೆಂಟು ಬಾಗಿಲುಗಳಿವೆ. ನೂರಹದಿನಾಲ್ಕು ಅಡಿಮಟ್ಟದಲ್ಲಿ ನಲ್ವತ್ತೆಂಟು ಬಾಗಿಲು ಇವೆ. ಕೆಳಗಿನ ಬಾಗಿಲನ್ನು ಕೈಯಿಂದ ಎತ್ತುತ್ತಾರೆ. ಮೇಲಿನ ಬಾಗಿಲುಗಳು ತಮಗೆ ತಾವೇ ತೆರೆದುಕೊಳ್ಳುತ್ತವೆ.

ಸೂರ್ಯ ಕಣ್ಣು ಕೆಂಪಗೆ ಮಾಡಿಕೊಂಡಿದ್ದ. ಅವನು ಮನೆಗೆ ಹೊರಟಿದ್ದ. ನಾವು ಕಟ್ಟೆಯ ಹಿಂದೆ ಬೃಂದಾವನಕ್ಕೆ ಬಂದೆವು. ಇದು ಸುಂದರವಾದ ಉದ್ಯಾನವನ. ಎಪ್ಪತ್ತೈದು ಎಕರೆ ಜಾಗದಲ್ಲಿ ಇದೆ. ಇದರ ನೀರಿನ



ಬೃಂದಾವನ

ಕಾರಂಜಿಗಳು ಮನಮೋಹಕ. ಇಲ್ಲಿನ ಸಂಗೀತದ ಕಾರಂಜಿ ಪ್ರಸಿದ್ಧವಾಗಿದೆ. ದೀಪ ಬೆಳಗಿದಾಗ ಈ ತೋಟ ನಂದನವನದಂತೆ ಕಾಣುತ್ತದೆ. ದೀಪವನ್ನು ಬುಧವಾರ, ಶನಿವಾರ, ಭಾನುವಾರ ಮಾತ್ರ ಹಾಕುತ್ತಾರೆ. ಸಂಜೆ ಏಳರಿಂದ ಎಂಟು ಗಂಟೆವರೆಗೆ ದೀಪ ಇರುತ್ತದೆ. ಸಾವಿರದ ಒಂಬೈನೂರಾ ಮೂವತ್ತಆರರಲ್ಲಿ ಮಿರ್ಜಾ ಇಸ್ಮಾಯಿಲ್ ಇದನ್ನು ಸ್ಥಾಪಿಸಿದರಂತೆ. ಕಾಶ್ಮೀರದ ಶಾಲಿಮಾರ್ ತೋಟದಂತೆ ಇದು ಇರಬೇಕು ಎಂದು ಬಯಸಿದ್ದರಂತೆ. ಝಗಝಗಿಸುತ್ತಿದ್ದ ದೀಪಗಳು ಆರಿದವು. ನಾವು ತಡವರಿಸಿಕೊಂಡು ಬಂದೆವು. ನಮ್ಮ ಕಾರನ್ನು ಏರಿದೆವು. ಮೈಸೂರಿನಲ್ಲಿ ನಿಷಾದಬಾಗ್, ಕರ್ಜನ್‌ಪಾರ್ಕ್ ಚೆಲುವಾಂಬ ಪಾರ್ಕ್, ಮನುವನ ಮೊದಲಾದ ಉದ್ಯಾನವನಗಳಿವೆ. ಇವೆಲ್ಲ ಐದು-ಹತ್ತು ಎಕರೆ ಅಗಲವಾಗಿವೆ. ಕರ್ಜನ್‌ಪಾರ್ಕ್‌ನಲ್ಲಿ ದಸರಾಹಬ್ಬದಲ್ಲಿ ಫಲಪುಷ್ಪ ಪ್ರದರ್ಶನ ಇರುತ್ತದೆ ಎಂದು ಚಿಕ್ಕಪ್ಪ ಹೇಳಿದರು.

ಮಾರನೆಯ ದಿನ ಚಾಮುಂಡಿಬೆಟ್ಟಕ್ಕೆ ಹೊರಟೆವು. ಬೆಳಿಗ್ಗೆ ಉಪಹಾರ ಮುಗಿಸಿದೆವು. ಮಧ್ಯಾಹ್ನಕ್ಕೆ ಆಹಾರ ಕಟ್ಟಿಕೊಂಡೆವು. ನಗರ ಸಾರಿಗೆ ಬಸ್ಸು ಹತ್ತಿದೆವು. ನಮ್ಮ ಬಸ್ಸು ಚಲಿಸಿತು. ಕ್ಷಯರೋಗದ ಆಸ್ಪತ್ರೆ ದಾಟಿತು. ಇ.ಎಸ್.ಐ ಆಸ್ಪತ್ರೆ ದಾಟಿತು. ನಮ್ಮ ಎಡಕ್ಕೆ ಒಂದು ಎತ್ತರದ ಗೋಪುರ ಕಂಡಿತು. ಅದು ರಾಮಕೃಷ್ಣ ಆಶ್ರಮದ ದೇವಸ್ಥಾನ. ರಾಮಕೃಷ್ಣ ಆಶ್ರಮ ಒಂದು ಧರ್ಮಸಂಸ್ಥೆ. ಇದರಂತೆಯೇ ಮೈಸೂರಿನಲ್ಲಿ ಸುತ್ತೂರು ಮಠ, ಪರಕಾಲಮಠ, ಜೈನಬಸದಿಗಳಿವೆ. ನಮ್ಮ ಬಸ್ಸು ಮುಂದೆ ಹೊರಟಿತು. ಅಲ್ಲಿ ಮತ್ತೊಂದು ಗೋಪುರ. ಅದು ಲಕ್ಷ್ಮೀವೆಂಕಟರಮಣ ದೇವಸ್ಥಾನ. ಮೈಸೂರಿನಲ್ಲಿ ಪ್ರಸನ್ನ ವೆಂಕಟರಮಣಸ್ವಾಮಿ, ವಿಶ್ವೇಶ್ವರ, ಸೋಮೇಶ್ವರ, ಶ್ರೀರಾಮ ದೇವಸ್ಥಾನಗಳು ಇವೆ. ಅರಮನೆಯ ಆವರಣದಲ್ಲಿ ವರಾಹಸ್ವಾಮಿ, ಪ್ರಸನ್ನಕೃಷ್ಣಸ್ವಾಮಿ, ಭುವನೇಶ್ವರಿ, ಲಕ್ಮೀನಾರಾಯಣ ಸ್ವಾಮಿ, ತ್ರಿಗುಣೇಶ್ವರ ದೇವಸ್ಥಾನಗಳಿವೆ. ಸ್ವಲ್ಪ ಮುಂದೆ ಆಕಾಶವಾಣಿ ಎದುರಾಯಿತು. ದೇಶದಲ್ಲೇ ಪ್ರಥಮವಾಗಿ ಮೈಸೂರಿನಲ್ಲಿ ಆಕಾಶವಾಣಿ ಪ್ರಾರಂಭ ವಾಯಿತು. ಈ ವಿಷಯವನ್ನು ನಾನು ಓದಿದ್ದೆ. ಸಾವಿರದ ಒಂಬೈನೂರಾ

ಮೂವತ್ತ ಐದರಲ್ಲೇ ಗೋಪಾಲಸ್ವಾಮಿ ಎನ್ನುವವರು ಇಲ್ಲಿ ಆಕಾಶವಾಣಿಯನ್ನು ಪ್ರಾರಂಭಿಸಿದ್ದರಂತೆ.

ಸ್ವಲ್ಪ ಮುಂದಕ್ಕೆ ಹೋದಾಗ ರಸ್ತೆಯ ಎಡಭಾಗಕ್ಕೆ ವಿಶಾಲವಾದ ಪೌಳಿ. ಅದರ ಮಧ್ಯೆ ಬ್ರಿಟಿಷ್ ಮಾದರಿಯ ಸುಂದರ ಕಟ್ಟಡ. ಇವು ಕಂಡವು. ಅದು ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ. ಸಾವಿರದ ಒಂಬೈನೂರಾ ಐವತ್ತರಲ್ಲಿ ಭಾರತ ಸರ್ಕಾರ ಇದನ್ನು ಸ್ಥಾಪಿಸಿತು. ಇಲ್ಲಿ ಆಹಾರದ ಬಗ್ಗೆ, ಅದರ ಪೌಷ್ಠಿಕಾಂಶದ ಬಗ್ಗೆ ಸಂಶೋಧನೆ ನಡೆಯುತ್ತಿದೆ. ಹೊಸ ಹೊಸ ಆಹಾರದ ಮಾದರಿ ನಿರ್ಮಿಸುತ್ತಾರೆ ಎಂದು ಚಿಕ್ಕಪ್ಪ ಹೇಳಿದರು. ಬಸ್ಸು ಇನ್ನೂ ಸ್ವಲ್ಪ ಮುಂದಕ್ಕೆ ಹೋಯಿತು. ಅಲ್ಲಿ ಒಂದು ಪುಟ್ಟ ರೈಲು ಕಾಣಿಸಿತು. ಅದು ರೈಲು ಸಂಗ್ರಹಾಲಯ. ರಾಜರಾಣಿಯರು ಪ್ರಯಾಣ ಮಾಡುತ್ತಿದ್ದ ಗಾಡಿಗಳಿವೆ. 'ಸ್ಟೀಮ್ ಎಂಜಿನ್ ಕೋಚ್', 'ಮೋಟಾರ್ ಕಾರ್', ಸಾವಿರದ ಒಂಬೈನೂರಾ ಹದಿನಾಲ್ಕರಷ್ಟು ಹಳೆಯ ಸಿಗ್ನಲಿಂಗ್ ಸಾಮಗ್ರಿಗಳು, ಬಿಡಿಭಾಗಗಳು ಇವೆ. ಭಾರತೀಯ ರೈಲು ಬೆಳೆದು ಬಂದ ಬಗೆ, ಬದಲಾದ ರೀತಿ ಈ ಬಗ್ಗೆ ಕಟ್ಟಡದ ಒಳಗೆ ಚಿತ್ರಗಳಿವೆ ಎಂದು ಚಿಕ್ಕಪ್ಪ ಹೇಳಿದರು. ನಮ್ಮ ಬಸ್ಸು ಮುಂದುವರಿಯಿತು. ರೈಲ್ವೆ ನಿಲ್ದಾಣದ ವೃತ್ತವನ್ನು ಬಳಸಿತು. ಮೈಸೂರಿನಿಂದ ಬೆಂಗಳೂರಿಗೆ, ಅರಸೀಕೆರೆಗೆ, ಚಾಮರಾಜನಗರಕ್ಕೆ ರೈಲುಮಾರ್ಗ ಇದೆ. ಮಂಡಕಳ್ಳಿಯಲ್ಲಿ ವಿಮಾನ ಇಳಿದಾಣವೂ ಇದೆ. ಮಂಡಕಳ್ಳಿ ಮೈಸೂರಿಗೆ ಎಂಟು ಕಿಲೋಮೀಟರ್ ದೂರದಲ್ಲಿದೆ. ಅಪರೂಪಕ್ಕೆ ವಿಮಾನಗಳು ಇಳಿಯುತ್ತವೆ ಎಂದು ಚಿಕ್ಕಪ್ಪ ಹೇಳಿದರು. ನಮ್ಮ ಬಸ್ಸು ನಗರ ಬಸ್ ನಿಲ್ದಾಣಕ್ಕೆ ಹೋಯಿತು. ಅಲ್ಲಿಂದ ನಾವು ಬೆಟ್ಟಕ್ಕೆ ಬೇರೆ ಬಸ್ ಹಿಡಿದೆವು.

ಚಾಮುಂಡಿಬೆಟ್ಟ ಮೈಸೂರಿಗೆ ಆಗ್ನೇಯದಲ್ಲಿದೆ. ಕಾಲುನಡಿಗೆಗೆ ನಾಲ್ಕು ಕಿ.ಮೀ. ಹಾದಿ. ಬಸ್ಸಿಗೆ ಹನ್ನೆರಡು ಕಿ.ಮೀ. ಹಾದಿ. ನಮ್ಮ ಬಸ್ಸು 'ಜೂ', 'ರೇಸ್‌ಕೋರ್ಸ್', 'ಆಡಳಿತಾಧಿಕಾರಿಗಳ ತರಬೇತಿ ಕೇಂದ್ರ' ದಾಟಿ ಮುಂದುವರಿಯಿತು. ಮೈಸೂರಿನಲ್ಲಿ ಗೊತ್ತಾದ ಕಾಲದಲ್ಲಿ ಕುದುರೆ ಪಂದ್ಯ ಇರುತ್ತದೆ. ಆಗ ಇಲ್ಲಿ

ಕುದುರೆ ಪಂದ್ಯ ನಡೆಯುತ್ತದೆ. ತರಬೇತಿ ಕೇಂದ್ರದಲ್ಲಿ ಆಡಳಿತ ನಡೆಸುವ ದೊಡ್ಡ ಅಧಿಕಾರಿಗಳಿಗೆ ತರಪೇತು ಕೊಡುತ್ತಾರೆ ಎಂದರು. ಜೂ ಎಂದರೆ ಪ್ರಾಣಿಸಂಗ್ರಹಾಲಯ. ಇದಕ್ಕೆ ನಾಳೆ ಮಕ್ಕಳನ್ನು ಕರೆದುಕೊಂಡು ಬರೋಣ ಎಂದರು. ಬಸ್ಸು ಬೆಟ್ಟ ಬಳಸಿಕೊಂಡು ಹತ್ತಿತು. ಪೂರ್ವದಲ್ಲಿ ಒಂದು ಬ್ರಿಟಿಷ್ ಶೈಲಿಯ ಕಟ್ಟಡ. ಬಿಳಿಯ ಬಣ್ಣ ದೂರಕ್ಕೆ ತುಂಬಾ ಸುಂದರ. ಅದು ಲಲಿತಮಹಲ್ ಅರಮನೆ. ಈಗ ಅದು ಪ್ರವಾಸಿ ಹೋಟೆಲ್ ಆಗಿದೆ. ನಮ್ಮ ಬಸ್ಸು ಬೆಟ್ಟದ ಮೇಲೆ ಬಂದು ನಿಂತಿತು. ತಣ್ಣನೆಯ ಗಾಳಿ ಬೀಸುತ್ತಿತ್ತು. ಬೆಟ್ಟ ಸಮುದ್ರಮಟ್ಟದಿಂದ ಒಂದುಸಾವಿರದ ಅರವತ್ತು ಮೀಟರ್ ಎತ್ತರ ಇದೆಯಂತೆ. ಬಸ್ಸಿನಿಂದ ಇಳಿದೆವು. ಎದುರಿಗೆ ಮಹಿಷಾಸುರ ವಿಗ್ರಹ. ಪೊದೆಮೀಸೆ, ಎಡಗೈಯ್ಯಲ್ಲಿ ಹಾವು, ಬಲಗೈಯ್ಯಲ್ಲಿ ಕತ್ತಿ, ಹನ್ನೆರಡು ಅಡಿ, ರಾಕ್ಷಸಭಾವ. ಮಕ್ಕಳಿಗೆ ಖುಷಿಯಾಯಿತು. ಫೋಟೋ ತೆಗೆದೆವು.


ಮೈಸೂರಿಗೆ ಹಿಂದೆ ಮಹಿಷಪುರ ಎಂದು ಹೆಸರಿತ್ತು. ಮಹಿಷಾಸುರನಿಂದ ಮಹಿಷಪುರ ಎಂಬ ಹೆಸರು ಬಂತು ಎಂದು ಐತಿಹ್ಯವಿದೆ. ಶಾಸನಗಳಲ್ಲಿ ಮಹಿಷೂರು, ಮಹಿಷಪುರ, ಮಹಿಷೂರಪುರ ಎನ್ನುವ ಹೆಸರುಗಳು ಸಿಗುತ್ತವೆ. 1499ರ ನಂತರ 'ಮೈಸೂರು' ಎಂಬ ಹೆಸರು ಸಿಗುತ್ತದೆ. ಬೆಟ್ಟದ ಮೇಲೆ ಮಹಾಬಲೇಶ್ವರ ದೇವಾಲಯವಿದೆ. ಚಾಮುಂಡೇಶ್ವರಿ ದೇವಾಲಯವಿದೆ. ಹತ್ತನೆಯ ಶತಮಾನದ ವೇಳೆಗೆ ಇದು ಪುಣ್ಯಕ್ಷೇತ್ರವಾಗಿತ್ತು. ಶಾಸನಗಳಲ್ಲಿ ಇದನ್ನು ಮಚ್ಚಿಲದ ತೀರ್ಥ ಅಥವಾ ಮರ್ಬುಳದ ತೀರ್ಥ ಎಂದು ಕರೆದಿದ್ದಾರೆ. ಹೊಯ್ಸಳದೊರೆ ವಿಷ್ಣುವರ್ಧನ, ಅವನು ಮಹಾಬಲೇಶ್ವರ ದೇವಾಲಯಕ್ಕೆ ದತ್ತಿ ಬಿಟ್ಟಿದ್ದ. ಮೈಸೂರು ಅರಸರು ಚಾಮುಂಡೇಶ್ವರಿಯನ್ನು 'ಮಹಿಷಾಸುರ ಮರ್ದಿನಿ' ಎಂದು ಕರೆದರು. ಅವಳನ್ನು ಕುಲದೇವತೆ ಮಾಡಿಕೊಂಡರು. ಮುಮ್ಮಡಿಕೃಷ್ಣರಾಜ ಒಡೆಯರು ಒಂದು ಒಡವೆ ಕೊಟ್ಟಿದ್ದಾರೆ. ಅದರ ಹೆಸರು ನಕ್ಷತ್ರಮಾಲಿಕೆ. ಅದರ ಮೇಲೆ ದೇವಿಯ ಮೂವತ್ತು ಸ್ತೋತ್ರವನ್ನು ಕೆತ್ತಿದ್ದಾರೆ. ದೇವಸ್ಥಾನದಲ್ಲಿ ಅವರ ಮತ್ತು ಅವರ ಪತ್ನಿಯರ ವಿಗ್ರಹಗಳಿವೆ. ದೇವಸ್ಥಾನದಲ್ಲಿ ಪ್ರತಿ ಸೋಮವಾರ ವಿಶೇಷ ಪೂಜೆ. ಒಡೆಯರ ಕಾಲದಲ್ಲಿ ಈ ದೇವಸ್ಥಾನ ಅನೇಕ ಬದಲಾವಣೆ ಕಂಡಿತು. ಮೂರನೆಯ

ಕೃಷ್ಣರಾಜರು ದೇವಸ್ಥಾನ ನವೀಕರಿಸಿದರು. ಗೋಪುರ ಕಟ್ಟಿಸಿದರು. ಇಲ್ಲಿ ಆಶ್ವೀಜ ಶುದ್ಧ ಹುಣ್ಣಿಮೆ ದಿನ ರಥೋತ್ಸವ. ಅದಾದ ಎರಡು ದಿನಕ್ಕೆ ರಾತ್ರಿ ತೆಪ್ಪೋತ್ಸವ ಇರುತ್ತದೆ.

ಚಾಮುಂಡಿ ಬೆಟ್ಟದ ಮೇಲೆ ಒಂದು ಅರಮನೆ ಅದೆ. ಅದರ ಹೆಸರು 'ರಾಜೇಂದ್ರ ವಿಲಾಸ್ ಅರಮನೆ'. ಇದು ಅರಸರ ಬೇಸಿಗೆ ಅರಮನೆಯಾಗಿತ್ತು. ಈಗ ಇದು ಹೋಟೆಲ್ ಆಗಿದೆ. ನಾವು ತಂದಿದ್ದ ಬುತ್ತಿಯನ್ನು ಊಟಮಾಡಿದೆವು. ದೊಡ್ಡ ಬಸವನನನ್ನು ನೋಡಲು ಹೊರಟೆವು. ಮೈಸೂರಿನ ದಿಕ್ಕಿಗೆ ಮೆಟ್ಟಿಲ ದಾರಿಯಿದೆ. ಸಾವಿರ ಮೆಟ್ಟಿಲುಗಳಿವೆ. ಇವುಗಳನ್ನು ಸಾವಿರದ ಆರುನೂರ ಆರವತ್ತನಾಲ್ಕರಲ್ಲಿ ದೊಡ್ಡ ದೇವರಾಜರು ಕಟ್ಟಿಸಿದರಂತೆ. ನಾವು ಸುಮಾರು ಮುನ್ನೂರು ಮೆಟ್ಟಿಲು ಇಳಿದೆವು, ಅಲ್ಲಿ ಬೃಹದಾಕಾರದ ಒಂದೇ ಬಂಡೆಯಲ್ಲಿ ಬಸವನನ್ನು ಕಡೆದಿದ್ದಾರೆ. ನಂದಿ ತಲೆಎತ್ತಿದೆ. ವಿಶ್ರಾಂತಿ ಪಡೆಯುವಂತೆ ಮಲಗಿದೆ. ದಷ್ಟಪುಷ್ಟವಾಗಿದೆ. ಸಹಜ ಮುಖಲಕ್ಷಣ ಇದೆ. ಗಂಟೆಸರ, ಗೆಜ್ಜೆಸರ, ಗವಸುಗಳನ್ನು ಚೆನ್ನಾಗಿ ಕಡೆದಿದ್ದಾರೆ. ಇದು ಹದಿನಾರು ಅಡಿ ಎತ್ತರ ಇಪ್ಪತ್ತೈದು ಅಡಿ ಅಗಲ ಇದೆ. ನಾವು ಬೆಟ್ಟದಿಂದ ಮನೆಗೆ ಬಂದೆವು.

ಮಾರನೆಯ ದಿನ ಸಂತ ಫಿಲೋಮಿನಾ ಚರ್ಚ್ ಮತ್ತು ಪ್ರಾಣಿ ಸಂಗ್ರಹಾಲಯಕ್ಕೆ ಹೋಗಲು ಸಿದ್ಧತೆಯಾಯಿತು. ಒಂಭತ್ತು ಗಂಟೆಯ ವೇಳೆಗೆ ಚರ್ಚ್ ತಲುಪಿದೆವು. ಇದರ ಮೊನಚಾದ ಗೋಪುರ ಎತ್ತರವಾಗಿದೆ. ಸುಂದರವಾದ ಗಾಜಿನ ಕಿಟಕಿಗಳು ಚೆನ್ನಾಗಿವೆ. ಇದು ಬೆಳಗ್ಗೆ ಎಂಟರಿಂದ ಸಂಜೆ ಆರರವರೆಗೆ ದಿನವೂ ತೆರೆದಿರುತ್ತದೆ.

ಮೈಸೂರಿನಲ್ಲಿ ಸಂತ ಬಾರ್ತಲೊಮ್ಯೂ ಚರ್ಚು, ವೆಸ್ಲಿಮಿಷನ್ ಚರ್ಚು ಇವೆ. ಹನ್ನೆರಡಕ್ಕೂ ಹೆಚ್ಚು ಮಸೀದಿಗಳಿವೆ ಎಂದು ಚಿಕ್ಕಪ್ಪ ಹೇಳಿದರು. ಅಲ್ಲಿಂದ ನಾವು ಜೂ ನೋಡಲು ಹೋದೆವು. ಇದಕ್ಕೆ ಬೆಳಗ್ಗೆ ಎಂಟರಿಂದ ಸಂಜೆ ಐದರವರೆಗೆ ಪ್ರವೇಶ. ಇದನ್ನು 'ಚಾಮರಾಜೇಂದ್ರ ಪ್ರಾಣಿಸಂಗ್ರಹಾಲಯ' ಎನ್ನುತ್ತಾರೆ. ಅದನ್ನು



ಸಂತ ಫಿಲೋಮಿನಾ ಚರ್ಚ್

ನೂರು ವರ್ಷಗಳ ಹಿಂದೆ ಸ್ಥಾಪಿಸಿದರು. ಇದರ ಒಳಗೆ ನೂರಾರು ಎಕರೆ ಆವರಣ ಇದೆ. ದೇಶವಿದೇಶದ ಪಕ್ಷಿ ಪ್ರಾಣಿಗಳು ಇಲ್ಲಿವೆ. ಬಗೆ ಬಗೆಯ ಬಣ್ಣದ ಗಿಳಿಗಳಿವೆ. ಬಗೆಬಗೆಯ ಹಕ್ಕಿಗಳು ಇವೆ. ದೇಶವಿದೇಶದ ನೀರುಹಕ್ಕಿಗಳು ಇವೆ. ಹುಲಿ, ಸಿಂಹ, ಆನೆಗಳು ಇವೆ. ಆಫ್ರಿಕಾದ ಆನೆಗಳಿವೆ, ಜಿಂಕೆ, ಕಡವೆ, ಕರಡಿ, ಹಿಮಕರಡಿ, ನೀರಾನೆ ಜಿರಾಫೆ, ಗೊರಿಲ್ಲಾ, ಚಿಂಪಾಂಜಿ, ಬಗೆಬಗೆಯ ಕೋತಿಗಳು ಇವೆ. ಘೇಂಡಾಮೃಗ ಇದೆ. ಉಷ್ಟ್ರಪಕ್ಷಿ, ಬಗೆಬಗೆಯ ಹಾವುಗಳು, ಆಮೆಗಳು, ಮೀನುಗಳು, ಮೊಸಳೆಗಳು ಇವೆ. ಜೂ ಒಳಗಡೆ ಸತ್ತ ಪ್ರಾಣಿಗಳ ವಸ್ತು ಸಂಗ್ರಹಾಲಯವೂ ಇದೆ. ಇದರಲ್ಲಿ ಸತ್ತ ಪ್ರಾಣಿ ಪಕ್ಷಿಗಳನ್ನು ಜೀವಂತ ಕಾಣುವಂತೆ ಇರಿಸಿದ್ದಾರೆ. ಸತ್ತ ಪ್ರಾಣಿಗಳನ್ನು ಜೀವಂತ ಕಾಣುವಂತೆ ಮಾಡುವುದು ಒಂದು ಕಲೆ. ಇದಕ್ಕೆ 'ಟ್ಯಾಕ್ಸಿಡರ್ಮಿ' ಕಲೆ ಎನ್ನುತ್ತೇವೆ. ಇವುಗಳನ್ನು ನೋಡಿದೆವು. ಸಂಜೆ ಮನೆಗೆ ಮರಳಿದೆವು. ದಾರಿಯಲ್ಲಿ ತರಕಾರಿ ತರುವ ಹೊರೆ ನಮಗೆ ಬಿತ್ತು.

ನಾನು ಚಿಕ್ಕಪ್ಪ ಪುರಭವನದ ಬಳಿ ಇಳಿದುಕೊಂಡೆವು. ಹೆಂಗಸರು ಮಕ್ಕಳು ನೇರವಾಗಿ ಮನೆಗೆ ಹೋದರು. ಪುರಭವನಕ್ಕೆ 'ರಂಗಾಚಾರ್ಲು ಸ್ಮಾರಕ ಪುರಭವನ' ಎಂದು ಹೆಸರು. ರಂಗಾಚಾರ್ಲು ಹಿಂದೆ ಮೈಸೂರಿನ ದಿವಾನರಾಗಿದ್ದರು. ಅವರ ನೆನಪಿಗಾಗಿ ಈ ಕಟ್ಟಡ ಕಟ್ಟಿದ್ದಾರೆ. ಇದರಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಪುರಭವನದ ಎದುರು ಒಂದು ಗಡಿಯಾರದ ಗೋಪುರ ಇದೆ. ನಾಲ್ವಡಿ ಕೃಷ್ಣರಾಜರ ಆಡಳಿತದ ಬೆಳ್ಳಿಹಬ್ಬದ ನೆನಪಿಗೆ ಈ ಗೋಪುರ ನಿರ್ಮಾಣವಾಯಿತಂತೆ. ನಾವು ಗಾಂಧಿ ಚೌಕದ ಮೂಲಕ ಸಯ್ಯಾಜಿರಾವ್ ರಸ್ತೆಗೆ ಬಂದೆವು. ಅಲ್ಲಿ ಪೋಲೀಸರ ಜೊತೆಗೆ ಅರಮನೆಯ ಕುದುರೆಗಳು ಇದ್ದವು. ಕುದುರೆ ಸವಾರರು ಸಮವಸ್ತ್ರ ಧರಿಸಿದ್ದರು. ಕುದುರೆಗಳು ರಸ್ತೆಯ ಕಡೆ ಅಲ್ಲಲ್ಲಿ ನಿಂತಿದ್ದವು. ನಾವು ರಸ್ತೆ ದಾಟಿದೆವು. ಮಾರುಕಟ್ಟೆ ಪ್ರವೇಶಿಸಿದೆವು. ಅದಕ್ಕೆ ದೇವರಾಜ ಮಾರುಕಟ್ಟೆ ಎಂದು ಹೆಸರು. ಇದು ಹಣ್ಣು, ತರಕಾರಿ, ಹೂವುಗಳ ದೊಡ್ಡ ಮಾರುಕಟ್ಟೆ. ಮೈಸೂರಿನ ಮಲ್ಲಿಗೆ, ವೀಳ್ಯದೆಲೆ ಹಾಗೂ ಶ್ರೀಗಂಧಗಳು ಪ್ರಸಿದ್ಧ. ನಾವು ತರಕಾರಿ ಕೊಂಡೆವು. ಮಲ್ಲಿಗೆ ವೀಳ್ಯದೆಲೆಯನ್ನು ಕೊಂಡೆವು. ಜೊತೆಗೆ ನಂಜನಗೂಡಿನ

ರಸಬಾಳೆಯನ್ನು ಕೊಂಡೆವು. ನಾವು ಮನೆ ತಲುಪುವುದರಲ್ಲಿ ಕತ್ತಲಾಗಿತ್ತು. ಮರು ದಿನ ಜಗನ್ಮೋಹನ ಪ್ಯಾಲೆಸ್ ಮತ್ತು ಅರಮನೆಯ ದೀಪಾಲಂಕಾರಗಳನ್ನು ನೋಡುವುದು ಎಂದುಕೊಂಡೆವು. ಬೆಳಿಗ್ಗೆ ಹತ್ತು ಗಂಟೆಯ ಹೊತ್ತಿಗೆ ಜಗನ್ಮೋಹನ ಅರಮನೆಗೆ ಹೋದೆವು. ಮೈಸೂರಿನ ಹಳಬರು ಇದನ್ನು ತಮಾಷ್ ಬಂಗಲೆ ಎನ್ನುತ್ತಾರೆ. ಒಳಕ್ಕೆ ಬೆಳಿಗ್ಗೆ ಎಂಟು ಗಂಟೆಯಿಂದ ಸಂಜೆ ಐದರವರೆಗೆ ಪ್ರವೇಶ. ಅದನ್ನು 'ಜಯಚಾಮರಾಜೇದ್ರ ಆರ್ಟ್ ಗ್ಯಾಲರಿ' ಎಂದು ಕರೆಯುತ್ತಾರೆ. ಮುಮ್ಮಡಿ ಕೃಷ್ಣರಾಜರು ಇದನ್ನು ಕಟ್ಟಿಸಿದರು. ನಾಲ್ವಡಿ ಕೃಷ್ಣರಾಜರು ಇದನ್ನು ಚಿತ್ರಶಾಲೆಯಾಗಿ ಪರಿವರ್ತಿಸಿದರು. ಇಲ್ಲಿ ಒಂದು ಚಿತ್ರಶಾಲೆಯಿದೆ. ಜೊತೆಗೆ ವಿವಿಧ ಸಂಗ್ರಹಾಲಯಗಳೂ ಇವೆ. ರಾಜಾ ರವಿವರ್ಮ, ರೋರಿಚ್, ನಂದಲಾಲಬೋಸ್, ವೆಂಕಟಪ್ಪ, ಪೀಟರ್ಪಾಲ್, ರಾಮವರ್ಮ ಅವರುಗಳು ರಚಿಸಿದ ಚಿತ್ರಗಳಿವೆ. ಇವುಗಳಲ್ಲಿ ರವಿವರ್ಮನ 'ಹಂಸ ಸಂದೇಶ', ಎಸ್. ಜಿ. ಹಲ್ಲೆಂಕರ್ ಅವರ ದೀಪ ಹಿಡಿದ ಹೆಣ್ಣಿನ ಚಿತ್ರಗಳು ಖ್ಯಾತಿಗಳಿಸಿವೆ. ಮುಮ್ಮಡಿ ಮತ್ತು ನಾಲ್ವಡಿ ಚಾಮರಾಜರ ವರ್ಣಚಿತ್ರಗಳು, ವಿಕ್ಟೋರಿಯಾ ರಾಣಿಯ ರಜತ ಮಹೋತ್ಸವದ ಚಿತ್ರ, ಟಿಪ್ಪುವಿನ ಚಿತ್ರಗಳು, ಬೆಂಗಳೂರು ಕೋಟೆಯುದ್ಧ, ಶ್ರೀರಂಗಪಟ್ಟಣದ ಯುದ್ಧ, ಟಿಪ್ಪು ತನ್ನ ಮಕ್ಕಳನ್ನು ಬ್ರಿಟಿಷರಿಗೆ ಒಪ್ಪಿಸಿದ್ದು ಮೊದಲಾದ ಚಿತ್ರಗಳು, ಮೈಸೂರು ದಿವಾನರ ಚಿತ್ರಗಳು ಇವೆ.

ಕಲಾತ್ಮಕ ಕುಂಭಗಳು, ಪಿಂಗಾಣಿ ಗಾಜಿನ ವಸ್ತುಗಳು, 'ಫ್ರೆಂಚ್ ಮ್ಯೂಸಿಕಲ್ ಕ್ಯಾಲೆಂಡರ್' ಗಡಿಯಾರ, ವಿವಿಧ ಮಾದರಿಯ ಇನ್ನಿತರ ಗಡಿಯಾರಗಳು, ನೇಪಾಳಿ ಗಂಟೆ, ಷೇಕ್ಸ್‌ಪಿಯರ್ ನಾಟಕದ ಬೆಳ್ಳಿ ಉಬ್ಬು ಚಿತ್ರಗಳು, ಆಭರಣ ಪೆಟ್ಟಿಗೆಗಳು, ಹಳೆ ನಾಣ್ಯಗಳು, ಅಕ್ಕಿಕಾಳಿನ ಮೇಲೆ ಕಲೆ, ಹಿತ್ತಾಳೆ ತಾಮ್ರದ ಕಲಾತ್ಮಕ ವಸ್ತುಗಳು ಇವೆ. ನಾಲ್ವಡಿ ಕೃಷ್ಣರಾಜರ ಮದುವೆ ಇಲ್ಲೇ ನಡೆಯಿತಂತೆ. ಮೈಸೂರು ಪ್ರಜಾಪ್ರತಿನಿಧಿ ಸಭೆ ಇಲ್ಲೇ ನಡೆಯುತ್ತಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವವೂ ಇಲ್ಲೇ ನಡೆಯುತ್ತಿತ್ತು. ಸಾವಿರದ ಒಂಬೈನೂರಾ ಎರಡರಲ್ಲಿ ನಾಲ್ವಡಿ ಕೃಷ್ಣರಾಜರು ಲಾರ್ಡ್ ಕರ್ಜನ್ ಅವರೊಂದಿಗೆ ಇಲ್ಲಿ ದರ್ಬಾರು ನಡೆಸಿದರು ಎಂದು ಚಿಕ್ಕಪ್ಪ ಹೇಳಿದರು. ನಾವು ಊಟ

ಮುಗಿಸಿದೆವು. ಅರಮನೆ ಪಕ್ಕದ ಉದ್ಯಾನವನದಲ್ಲಿ ವಿಶ್ರಮಿಸಿದೆವು. ಬಿಸಿಲು ಕಡಿಮೆಯಾಯಿತು. ದಸರಾ ವಸ್ತುಸಂಗ್ರಹಾಲಯ ನೋಡಲು ಹೊರಟೆವು. ಇದು ಅರಮನೆಯ ಮುಂದೆ ದೊಡ್ಡಕೆರೆಯ ಮೈದಾನದಲ್ಲಿದೆ. ಗ್ರಾಹಕರಿಗೆ ಬೇಕಾದ ಎಲ್ಲಾ ವಸ್ತುಗಳೂ ಇದ್ದವು. ಮಕ್ಕಳ ಮನರಂಜನೆಗೆ ಬಗೆಬಗೆಯ ತಿರುಗು ಗಾಲಿಗಳು ಇದ್ದವು. ಹೆಂಗಸರು ಸಣ್ಣಪುಟ್ಟ ಸಾಮಾನು ಕೊಂಡರು. ಅಲ್ಲಿಂದ ನಾವು ಅರಮನೆಗೆ ಬಂದೆವು. ಅರಮನೆಯಲ್ಲಿ ಸಂಗೀತಕಛೇರಿ ನಡೆಯುತ್ತಿತ್ತು. ಕತ್ತಲು ಆವರಿಸುತ್ತಿದ್ದಂತೆ ಝಗ್ಗನೆ ದೀಪ ಹತ್ತಿಸಿದರು. ನನಗೆ ಒಂದು ಕ್ಷಣ ಅರಮನೆಯೇ ಹತ್ತಿಕೊಂಡಂತೆ ಅನ್ನಿಸಿತು. ಅರಮನೆಯ ಪೌಳಿಗೆ ನಾಲ್ಕು ಮಹಾದ್ವಾರಗಳಿವೆ. ನಾಲ್ಕು ದ್ವಾರಗಳೂ ಝಗಝಗಿಸಿದವು.

ಅರಮನೆಯ ಮುಂದೆ ವಿಶಾಲವಾದ ಅಂಗಳವಿದೆ. ಅರಮನೆಯ ಮುಂಧೆ ಎಡ ಮತ್ತು ಬಲಕ್ಕೆ ದೇವಸ್ಥಾನಗಳಿವೆ. ಅವುಗಳಲ್ಲೂ ದೀಪಗಳು ಬೆಳಗಿದವು. ಹಳ್ಳಿಯಿಂದ ಬಂದ ನಮಗೆ ಅದು ಇಂದ್ರನ ಅರಮನೆಯಂತೆ ಕಂಡಿತು. ಈ ದೀಪಾಲಂಕಾರವನ್ನು ಅರಮನೆಗೆ ಬಹಳ ಹಿಂದೆಯೇ ಮಾಡಿಸಿದ್ದಾರೆ. ಸಾವಿರದ ಒಂಬೈನೂರೂ ಏಳರಲ್ಲೇ ಮೈಸೂರಿಗೆ ವಿದ್ಯುತ್ ಬಂದಿತ್ತು. ಸಾವಿರದ ಒಂಬೈನೂರಾ ಎಂಬತ್ತ ಏಳರಲ್ಲಿ ಹಳೆ ಅರಮನೆಗೆ ಬೆಂಕಿ ಬಿದ್ದಿತ್ತು. ಅದರ ಜಾಗದಲ್ಲಿ ಈ ಅರಮನೆಯನ್ನು ಕಟ್ಟಿದರಂತೆ. ಇದನ್ನು ಕಟ್ಟಲು ಹತ್ತು ವರ್ಷ ಹಿಡಿಯಿತು. ಹೆನ್ರಿ ಇರ್ವಿನ್ ಎಂಬುವನು ಇದರ ನಕ್ಷೆ ತಯಾರಿಸಿದನು. ಇದರಲ್ಲಿ ಹಿಂದೂ, ಮುಸ್ಲಿಂ, ಬ್ರಿಟಿಷ್ ಶೈಲಿಗಳು ಕೂಡಿಕೊಂಡಿವೆ. ಈ ಶೈಲಿಗೆ ಇಂಡೋ ಸಾರ್ಸನಿಕ್ ಶೈಲಿ ಎಂದು ಕರೆಯುತ್ತಾರೆ. ಈ ಅರಮನೆ ಈಗ ಪುರಾತತ್ವ ಇಲಾಖೆಯ ವಶದಲ್ಲಿದೆ. ಪ್ರತಿ ಭಾನುವಾರ ಮತ್ತು ರಜಾದಿನಗಳಲ್ಲಿ ದೀಪಾಲಂಕಾರ ಇರುತ್ತದೆ. ಈಗ ದಸರಾ ಆದ್ದರಿಂದ ನಿತ್ಯವೂ ಇದೆ ಎಂದು ಚಿಕ್ಕಪ್ಪ ಹೇಳಿದರು. ಅರಮನೆಯ ಅಂಗಳದಲ್ಲಿ ನಿಮಿಷ ನಿಮಿಷಕ್ಕೂ ಜನಜಂಗುಳಿ ಜಾಸ್ತಿಯಾಯಿತು. ನಾವು ಮನೆಗೆ ಹೊರಟು ಬಂದೆವು.

ಮಾರನೆಯದಿನ ಅರಮನೆಯ ಒಳಭಾಗ ನೋಡಲು ಹೊರಟೆವು. ಒಳಕ್ಕೆ



ದೀಪಾಲಂಕಾರಗೊಂಡ ಮೈಸೂರು ಅರಮನೆ

ಬೆಳಿಗ್ಗೆ ಹತ್ತು ಮೂವತ್ತರಿಂದ ಐದೂವರೆವರೆಗೆ ಬಿಡುತ್ತಾರೆ. ರಜಾದಿನಗಳಲ್ಲಿ ಬಿಡುವುದಿಲ್ಲ. ಅರಮನೆಯ ಮುಖ್ಯ ಕಟ್ಟಡಕ್ಕೆ ಮೂರು ಅಂತಸ್ತುಗಳಿವೆ. ಐದು ಅಂತಸ್ತಿನ ಎತ್ತರವಾದ ಗೋಪುರ ಇದೆ. ಗೋಪುರದ ಜೊತೆಗೆ ಗುಮ್ಮಟಗಳೂ ಇವೆ. ಅರಮನೆಯನ್ನು ತೊಟ್ಟಿಯ ಸುತ್ತ ಕಟ್ಟಿದೆ. ಪೂರ್ವಭಾಗದಲ್ಲಿ ಗೊಂಬೆ ತೊಟ್ಟಿ, ಕಲ್ಯಾಣ ಮಂಟಪ ಆಯುಧಶಾಲೆ, ಪಾರಿತೋಷಕ ಕೊಠಡಿಗಳಿವೆ.

ಮೊದಲ ಅಂತಸ್ತಿನಲ್ಲಿ ದರ್ಬಾರ್ ಸಭಾಂಗಣ ಇದೆ. ಇದು ವಿಶಾಲ ವಾಗಿದೆ. ಇದಕ್ಕೆ ಅನೇಕ ಕಂಬಗಳಿವೆ. ಇಲ್ಲಿ ಒಂದು ಪ್ರತಿಮೆಯಿದೆ. ಅದು ನಾಲ್ವಡಿ ಕೃಷ್ಣರಾಜರದು. ಪ್ಲಾಸ್ಟರ್ ಆಫ್ ಪ್ಯಾರಿಸಿನಿಂದ ರಚಿಸಿದ್ದಾರೆ. ಅರಮನೆಯ ಒಳಗೆ ಏಳುನೂರು ಕೆ.ಜಿ. ತೂಕದ ಚಿನ್ನದ ಅಂಬಾರಿ ಇದೆ. ನಾಲ್ಕುಸಾವಿರ ತೊಲದ ರತ್ನಖಚಿತ ಚಿನ್ನದ ಸಿಂಹಾಸನವಿದೆ. ರಾಜಮನೆತನದವರ ಭವ್ಯಚಿತ್ರಗಳಿವೆ. ಅವರು ಬಳಸುತ್ತಿದ್ದ ಆಯುಧಗಳಿವೆ. ಬೆಳ್ಳಿಯ ಪೀಠೋಪಕರಣಗಳಿವೆ. ಆಕರ್ಷಣೀಯ ಕಲ್ಯಾಣ ಮಂಟಪ ಇದೆ. ಜಪಾನಿನ ಪಿಂಗಾಣಿ ಹೂದಾನಿಗಳು, ಬ್ರಿಟಿಷ್ ಮಾದರಿ ದೊಡ್ಡ ಮತ್ತು ಚಿಕ್ಕ ಮೇಣೆಗಳು, ಬೆಳ್ಳಿಯ ಕುರ್ಚಿ, ಮೇಜು, ದಿವಾನ, ಸೋಫಾ, ತೊಟ್ಟಿಲು ಇವೆ. ಗಾಜಿನ ಪೀಠೋಪಕರಣಗಳು, ಸುಗಂಧಪೆಟ್ಟಿಗೆ, ರಾಜರು ಬಳಸುತ್ತಿದ್ದ ಪಾದರಕ್ಷೆಗಳು, ಉಡುಪುಗಳು ಎಲ್ಲವನ್ನೂ ಅಚ್ಚುಕಟ್ಟಾಗಿ ಜೋಡಿಸಿದ್ದಾರೆ. ನಾವು ಈ ಭವ್ಯ ವಸ್ತುಗಳನ್ನು ನೋಡಿದೆವು. ನಾನು ಮನೆಗೆ ಹೋಗೋಣ ಎಂದೆ. ಹೆಂಗಸರು ಪೇಟೆಯಲ್ಲಿ ಕೆಲಸ ಇದೆ ಎಂದರು. ನಮ್ಮ ಜೇಬಿನ ಲಕ್ಷ್ಮಿ ಅವರ ಜಂಬದ ಚೀಲಕ್ಕೆ ಹಾರಿದಳು. ನಾನು ಚಿಕ್ಕಪ್ಪ ಮನೆಗೆ ಬಂದೆವು. ಹೆಂಗಸರು ಮಕ್ಕಳು ಪೇಟೆ ಕೊಳ್ಳಲು ಹೋದರು.

ನಾವಿಬ್ಬರೇ ಮನೆಗೆ ಹೋಗಿ ಊಟ ಮಾಡಿ ಅಡ್ಡಾದೆವು. ಚಿಕ್ಕಪ್ಪ ಮೈಸೂರು ಅರಸರ ಚರಿತ್ರೆಯ ಒಂದು ಪುಸ್ತಕವನ್ನು ನನಗೆ ಕೊಟ್ಟರು. ನಾನು ಅದನ್ನು ಓದುತ್ತಾ ಹಾಸಿಗೆ ಒರಗಿದೆ. ಅದರಲ್ಲಿನ ಸಾರಾಂಶ ನಿಮಗೆ ಹೇಳುತ್ತೇನೆ.

ಒಂದು ಐತಿಹ್ಯವಿದೆ. ಅದು ಯದುರಾಯ ತನ್ನ ಸೋದರನೊಡನೆ ಇಲ್ಲಿಗೆ

ಬಂದ. ಅವನು ದ್ವಾರಕೆಯಿಂದ ಬಂದ ಎಂಬುದು. ಈ ಸೋದರರು ಮೈಸೂರಿನ ಬಳಿ ಹದಿನಾಡಿನಲ್ಲಿ ನೆಲಸಿದರು. ಚಾಮರಾಜ ಹದಿನಾಡಿನ ಪಾಳೆಯಗಾರನಾಗಿದ್ದ. ಅವನು ಗತಿಸಿದ. ಮಾರನಾಯಕ ಪಾಳೆಯಗಾರನಾದ. ರಾಜಕುಟುಂಬವನ್ನು ತನ್ನ ಅಂಕೆಯಲ್ಲಿ ಇಟ್ಟುಕೊಂಡ. ಆಗ ರಾಜಕುಟುಂಬದ ನೆರವಿಗೆ ಈ ಸೋದರರು ಹೋದರು. ಮಾರನಾಯಕನನ್ನು ಕೊಂದರು. ರಾಜಕುಮಾರಿಯನ್ನು ಯದುರಾಯ ಮದುವೆಯಾದ. ಹದಿನಾಡು-ಕಾರಿಗಹಳ್ಳಿಗೆ ಪಾಳೆಗಾರನಾದ. ಈ ಸಂದರ್ಭದಲ್ಲಿ ಜಂಗಮನೊಬ್ಬ ಯದುರಾಯನಿಗೆ ನೆರವಾದ. ಅದಕ್ಕೆ ಯದುರಾಯ ತನ್ನ ಹೆಸರಿನ ಜೊತೆಗೆ ಒಡೆಯರ್ ಎಂಬ ಪದ ಸೇರಿಸಿಕೊಂಡ. ಯದುರಾಯ ಪರಂಪರೆಯಲ್ಲಿ ಅನೇಕ ದೊರೆಗಳು ಆಳಿದರು. ಇವರಲ್ಲಿ ಪ್ರಮುಖ ದೊರೆ ರಾಜಒಡೆಯರು. ಇವರು ಮೈಸೂರಲ್ಲಿ ಕೋಟೆ ಕಟ್ಟಿದರು. ಸುತ್ತಲಿನ ಪ್ರದೇಶ ಗೆದ್ದರು. ತಿರುಮಲರಾಯ ವಿಜಯನಗರದ ಪ್ರತಿನಿಧಿ. ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ. ಇವನನ್ನೂ ರಾಜರು ಸೋಲಿಸಿದರು. ಶ್ರೀರಂಗಪಟ್ಟಣ ವಶಪಡಿಸಿಕೊಂಡರು. ಇಡೀ ಮೈಸೂರು ಜಿಲ್ಲೆ ಅವರಿಗೆ ವಶವಾಯಿತು. ಶ್ರೀರಂಗಪಟ್ಟಣವನ್ನು ರಾಜಧಾನಿ ಮಾಡಿಕೊಂಡರು. ನಂತರ ಚಾಮರಾಜ ಒಡೆಯರು ಪಟ್ಟಕ್ಕೆ ಬಂದರು. ಮತ್ತಷ್ಟು ರಾಜ್ಯ ವಿಸ್ತರಿಸಿದರು. ನಂತರ ಇಮ್ಮಡಿ ರಾಜಒಡೆಯರು ಪಟ್ಟಕ್ಕೆ ಬಂದರು. ದಳವಾಯಿ ವಿಕ್ರಮರಾಯ ಇವರನ್ನು ಕೊಲೆ ಮಾಡಿದ. ಆಗ ಒಂದನೆಯ ರಣಧೀರ ಕಂಠೀರವ ನರಸರಾಜರು ಆಡಳಿತ ಸೂತ್ರ ಹಿಡಿದರು. ಶ್ರೀರಂಗಪಟ್ಟಣ, ಮೈಸೂರು ಕೋಟೆಗಳನ್ನು ಭದ್ರಪಡಿಸಿದರು.ರಾಜ್ಯದ ಸಂಪತ್ತು, ಶಕ್ತಿ ಹೆಚ್ಚಿತು. ನಂತರ ದೇವರಾಜ ಒಡೆಯರು ಆಳಿದರು. ಆಮೇಲೆ ಚಿಕ್ಕದೇವರಾಜ ಒಡೆಯರು ಆಳಿದರು. ಇವರು ರಾಜ್ಯವನ್ನು ಅಪಾರವಾಗಿ ವಿಸ್ತರಿಸಿದರು. ದೇಶದ ಕೋಶ ತುಂಬಿತು. ಅವರನ್ನು ನವಕೋಟಿ ನಾರಾಯಣ ಎಂದು ಕರೆಯುತ್ತಿದ್ದರು. ದೆಹಲಿಯ ಬಾದಷಹ ಇವರಿಗೆ ಸನ್ಮಾನ ಮಾಡಿದ. ಇವರ ಕಾಲ ಮೈಸೂರು ಇತಿಹಾಸದಲ್ಲಿ ಒಳ್ಳೆಯ ಕಾಲ. ನಂತರ ಚಿಕ್ಕದೇವರಾಜರ ಮಗ ಇಮ್ಮಡಿ ಕಂಠೀರವ ನರಸರಾಜರು ಪಟ್ಟಕ್ಕೆ ಬಂದರು. ಇವರು ಅಬಲರಾಗಿದ್ದರು. ಕಳಲೆ ದಳವಾಯಿಗಳು ಹೆಚ್ಚಿಕೊಂಡರು. ನಂತರ ದೊಡ್ಡ ಕೃಷ್ಣರಾಜ ಒಡೆಯರು ಪಟ್ಟಕ್ಕೆ ಬಂದರು. ಮುಸ್ಲಿಮರು ದಾಳಿಮಾಡಿದರು. ಮರಾಠರೂ ದಾಳಿ ಮಾಡಿದರು. ಮೈಸೂರಿನ ಸ್ಥಿತಿ ಹದಗೆಟ್ಟಿತು. ನಂತರ ಆರನೆಯ ಚಾಮರಾಜರು ಪಟ್ಟಕ್ಕೆ ಬಂದರು.

ದಳವಾಯಿ ದೇವರಾಜಯ್ಯ ಇವರನ್ನು ಸೆರೆಮನೆಗೆ ಹಾಕಿದನು. ನಂತರ ಇಮ್ಮಡಿ ಕಷ್ಣರಾಜರು ಪಟ್ಟಕ್ಕೆ ಬಂದರು. ಇವರ ಕಾಲದಲ್ಲಿ ಹೈದರನ ಅಧಿಕಾರ ಬೆಳೆಯಿತು. ಕಡೆಗೆ ಅವನೇ ಸರ್ವಾಧಿಕಾರಿಯಾದ. ಹೈದರನ ಮಗ ಟಿಪ್ಪು ಸುಲ್ತಾನ್ ಹೈದರನ ನಂತರ ಸರ್ವಾಧಿಕಾರಿಯಾದ. ಟಿಪ್ಪು ಬ್ರಿಟಿಷರ ಮೇಲೆ ಯುದ್ಧ ಮಾಡಿದ. ಯುದ್ಧದಲ್ಲಿ ಮಡಿದ. ಶ್ರೀರಂಗಪಟ್ಟಣ ಬ್ರಿಟಿಷರ ವಶಕ್ಕೆ ಬಂದಿತು. ಬ್ರಿಟಿಷರು ಮೈಸೂರನ್ನು ರಾಜವಂಶಕ್ಕೆ ಮರಳಿ ಕೊಟ್ಟರು. ಮುಮ್ಮಡಿ ಕೃಷ್ಣರಾಜರಿಗೆ ಪಟ್ಟಾಭಿಷೇಕವಾಯಿತು. ಆಗ ಕೃಷ್ಣರಾಜರಿಗೆ ಐದು ವರ್ಷ ವಯಸ್ಸು. ಬ್ರಿಟಿಷರು ರೆಸಿಡೆಂಟನನ್ನು ಮೇಲ್ವಿಚಾರಣೆಗೆ ನೇಮಿಸಿದರು. ಪೂರ್ಣಯ್ಯನವರು ದಿವಾನರೆಂದು ನೇಮಕಗೊಂಡರು. ರಾಜಧಾನಿ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಬಂದಿತು. ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಎರಡು ಭಾರಿ ಕ್ಷಾಮಗಳು ಬಂದವು. ಸಾವಿರದ ಎಂಟುನೂರಾ ಮೂವತ್ತರಲ್ಲಿ ನಗರ ಪ್ರಾಂತದಲ್ಲಿ ಬಂಡಾಯ ಎದ್ದಿತು. ಇದರ ನೆಪದಲ್ಲಿ ಬ್ರಿಟಿಷರು ಮೈಸೂರನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ನೇರ ಆಡಳಿತ ಮಾಡಿದರು.

ಐವತ್ತು ವರ್ಷಗಳು ಕಳೆದವು. ಬ್ರಿಟಿಷರು ಮತ್ತೆ ಅಧಿಕಾರವನ್ನು ರಾಜರಿಗೆ ಕೊಟ್ಟರು. ಒಂಬತ್ತನೆಯ ಚಾಮರಾಜರು ಅಧಿಕಾರಕ್ಕೆ ಬಂದರು. ದಿವಾನ್ ರಂಗಾಚಾರ್ಲು, ಕೆ. ಶೇಷಾದ್ರಿ ಐಯ್ಯರ್ ಅವರ ನೆರವಿನಿಂದ ಆಡಳಿತ ನಡೆಸಿದರು. ಮೈಸೂರು ದೇಶದಲ್ಲಿ ರೈಲ್ವೆ, ಕಟ್ಟೆನಾಲೆ ನಿರ್ಮಾಣ ಆದವು. ರಾಜಪ್ರತಿನಿಧಿ ಸಭೆ ಪ್ರಾರಂಭವಾಯಿತು. ಆಡಳಿತ, ವಿದ್ಯಾಭ್ಯಾಸ, ಆರೋಗ್ಯ ಮೊದಲಾದ ವಿಭಾಗಗಳು ಪ್ರಾರಂಭವಾದುವು. ಮೈಸೂರು ಮಾದರಿ ಸಂಸ್ಥಾನವಾಯಿತು. ಅನಂತರ ನಾಲ್ವಡಿ ಕೃಷ್ಣರಾಜ ಒಡೆಯರು ಪಟ್ಟಕ್ಕೆ ಬಂದರು.

ವಿ. ಎಸ್. ಕೃಷ್ಣಮೂರ್ತಿ, ಕಾಂತರಾಜ ಅರಸು, ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಇವರು ದಕ್ಷ ಆಡಳಿತಗಾರರು. ದಿವಾನರಾಗಿ ರಾಜರಿಗೆ ನೆರವಾದರು. ಕನ್ನಂಬಾಡಿ ಕಟ್ಟೆ, ಭದ್ರಾವತಿ ಕಬ್ಬಿಣ ಕಾರ್ಖಾನೆ, ಶಿವನಸಮುದ್ರದ ವಿದ್ಯುತ್ ಯೋಜನೆ, ಮೈಸೂರು ವಿಶ್ವವಿದ್ಯಾಲಯದ ಸ್ಥಾಪನೆ ಇವುಗಳು ಈ

ಕಾಲದಲ್ಲಿ ಆದವು. ಇವರು ಸ್ಥಳೀಯ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಿದರು. ಪ್ರಜಾಪ್ರತಿನಿಧಿ ಸಭೆಯನ್ನು ಪರಿಷ್ಕರಿಸಿದರು. ಲೋಕೋಪಯೋಗಿ ಕಾರ್ಯಗಳನ್ನು ಕೈಗೊಂಡರು. ಮೈಸೂರು ದೇಶೀಯ ಸಂಸ್ಥಾನಗಳಲ್ಲಿ ಮೊದಲ ಸ್ಥಾನ ಪಡೆಯಿತು. ನಂತರ ಜಯಚಾಮರಾಜೇಂದ್ರ ಒಡೆಯರು ಪಟ್ಟಕ್ಕೆ ಬಂದರು. ಇವರು ಮೈಸೂರು ಸಂಸ್ಥಾನದ ಕೊನೆಯ ದೊರೆ. ಭಾರತ ಸ್ವಾತಂತ್ರಗಳಿಸಿತು. ಮೈಸೂರು ಸಂಸ್ಥಾನವೂ ಒಕ್ಕೂಟ ಸೇರಬೇಕಾಯಿತು. ಅದಕ್ಕೆ ಇವರು ಒಪ್ಪಿಗೆ ಕೊಟ್ಟರು ಭಾರತ ಗಣರಾಜ್ಯವಾಗುವವರೆಗೆ ಇವರು ರಾಜ ಪ್ರಮುಖರಾಗಿದ್ದರು. ಆಮೇಲೆ ಸ್ವಲ್ಪ ವರ್ಷ ರಾಜ್ಯಪಾಲರಾಗಿದ್ದರು.

ಮೈಸೂರು ರಾಜರು ಸಾಹಿತ್ಯ, ಸಂಗೀತ, ಚಿತ್ರಕಲೆಗಳಿಗೆ ಆಶ್ರಯ ಕೊಟ್ಟರು. ಚಿಕ್ಕದೇವರಾಜನ ಆಶ್ರಯದಲ್ಲಿ ತಿರುಮಲಾರ್ಯ, ಚಿಕುಪಾಧ್ಯಾಯ ಸಿಂಗರಾರ್ಯ, ತಿಮ್ಮಕವಿ, ಮಲ್ಲಿಕಾರ್ಜುನ, ವರಪ್ರಸಾದ, ಚಿದಾನಂದ ಮೊದಲಾದ ಕವಿಗಳೂ ಇದ್ದರು. ಸಂಚಿಯ ಹೊನ್ನಮ್ಮ, ಶೃಂಗಾರಮ್ಮ ಮೊದಲಾದ ಕವಿಯಿತ್ರಿಯರೂ ಇದ್ದರು. ಚಿಕ್ಕದೇವರಾಜರು ಕವಿಗಳಾಗಿದ್ದರು. ಅವರೂ ಹಲವು ಗ್ರಂಥಗಳನ್ನು ರಚಿಸಿದ್ದಾರೆ.

ಮುಮ್ಮಡಿ ಕೃಷ್ಣರಾಜ ಒಡೆಯರು ಕವಿಗಳಾಗಿದ್ದರು. ಐವತ್ತೊಂಬತ್ತು ಪುಸ್ತಕಗಳು ಇವರ ಹೆಸರಿನಲ್ಲಿವೆ. ಇವರು ಶ್ರೀತತ್ವನಿಧಿ ಎಂಬ ಗ್ರಂಥ ರಚಿಸಿದ್ದಾರೆ. ಇದು ಒಂದು ಸಣ್ಣ ವಿಶ್ವಕೋಶ. ನಾಲ್ಕು ಸಾವಿರ ಚಿತ್ರಗಳು ಇದರಲ್ಲಿವೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಇದನ್ನು ಮರುಮುದ್ರಿಸಿದೆ. ಇವರ ಆಸ್ಥಾನದಲ್ಲಿ ದೇವಚಂದ್ರ ಇದ್ದ. ಇವನು ರಾಜರ ಚರಿತ್ರೆ ತಿಳಿಸುವ 'ರಾಜಾವಳಿ ಕಥೆ' ಬರೆದಿದ್ದಾನೆ. ಮತ್ತೊಬ್ಬ ಕವಿ ಕೆಂಪುನಾರಾಯಣ. ಅವನು 'ಮುದ್ರಾಮಂಜೂಷ' ಬರೆದಿದ್ದಾನೆ. ಗದ್ಯದ ಬರವಣಿಗೆಗೆ ಇದು ಹೆಸರಾಗಿದೆ. ವೀಣೆ ವೆಂಕಟಸುಬ್ಬಯ್ಯ, ಕುಣಿಗಲು ರಾಮಾಶಾಸ್ತ್ರಿ, ಸೋಸಲೆ ಗರಳಪುರಿಶಾಸ್ತ್ರಿ, ಅಳಿಯ ಲಿಂಗರಾಜ, ದೇವಲಾಪುರದ ನಂಜುಂಡ ಮೊದಲಾದ ಸಂಗೀತಗಾರರು, ಸಾಹಿತಿಗಳು, ಶಿಲ್ಪಿಗಳು

ಆಸ್ಥಾನದಲ್ಲಿದ್ದರು. ಚಾಮರಾಜ ಒಡೆಯರ ಆಸ್ಥಾನದಲ್ಲಿ ಬಸವಪ್ಪಶಾಸ್ತ್ರಿ ಇದ್ದರು. ಇವರು ಕಾಳಿದಾಸ ಹಾಗೂ ಷೇಕ್ಸ್‌ಪಿಯರನ ಕೃತಿಗಳನ್ನು ಅನುವಾದ ಮಾಡಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರು. ಸಂಗೀತಕ್ಕೆ ಪ್ರೋತ್ಸಾಹ ಕೊಟ್ಟರು. ವೈಣಿಕ ಶಿಖಾಮಣಿ ಶೇಷಣ್ಣ, ಭಕ್ಷಿಸುಬ್ಬಣ್ಣ, ಬಿಡಾರಂ ಕೃಷ್ಣಪ್ಪ, ಮೈಸೂರು ವಾಸುದೇವಾಚಾರ್ಯ, ತಚ್ಚೂರು ಶಿಂಗರಾಚಾರ್ಯ, ಚಿಂತನಪಲ್ಲಿ ವೆಂಕಟರಾವ್, ವೀಣೆ ಶಿವರಾಮಯ್ಯ, ವೀಣೆ ವೆಂಕಟಗಿರಿಯಪ್ಪ, ಬಿ. ದೇವೇಂದ್ರಪ್ಪ, ಆರ್.ಎನ್. ಕೇಶವಮೂರ್ತಿ, ಎ. ಎಸ್. ಶಿವರುದ್ರಪ್ಪ ಮೊದಲಾದ ಸಂಗೀತಗಾರರು, ಜಟ್ಟಿತಾಯಮ್ಮ, ತಿರುಮಕೂಡಲು ಸುಂದರಮ್ಮ ಮೊದಲಾದ ನಾಟ್ಯ ಕಲಾವಿದೆಯರು ಆಸ್ಥಾನದಲ್ಲಿದ್ದರು.

ಮಾರನೆಯ ದಿನ ದಸರಾ ಮೆರವಣಿಗೆ. ನಾವು ಊಟ ಮುಗಿಸಿ ಮಧ್ಯಾಹ್ನ ಹೊರಟೆವು. ನೂಕು ನುಗ್ಗಲು ಇಲ್ಲದ ಜಾಗ ಹುಡುಕಿದೆವು. ಮೆರವಣಿಗೆ ಬಂದಿತು. ಸೇವಾದಳ, ಪೋಲೀಸು, ಕುದುರೆ, ಸ್ತಬ್ಧಚಿತ್ರಗಳು, ಪೋಲೀಸ್ ವಾದ್ಯ ವಿವಿಧ ಜನಪದ ಕುಣಿತಗಳು -ಹೀಗೆ ಒಂದೊಂದೇ ಬಂದವು. ಕಡೆಯಲ್ಲಿ ಚಿನ್ನದ ಅಂಬಾರಿ ಹೊತ್ತ ಆನೆ ಬಂದಿತು. ಮೆರವಣಿಗೆ ನೋಡಿದೆವು. ಮೆರವಣಿಗೆ ಬನ್ನಿ ಮಂಟಪಕ್ಕೆ ಹೋಯಿತು. ನಾವು ಬನ್ನಿ ಮಂಟಪಕ್ಕೆ ಹೋದೆವು. ಅಲ್ಲಿಗೆ ಕರ್ನಾಟಕದ ರಾಜ್ಯಪಾಲರು ಬಂದಿದ್ದರು. ಪೋಲಿಸರ ವಂದನೆ, ಸೇವಾದಳದ ವಂದನೆ ಸ್ವೀಕರಿಸಿದರು. ಕುದುರೆಗಳ ಕವಾಯತು ಹಾಗೂ ಚಮತ್ಕಾರದ ಆಟ ನಡೆಯಿತು. ಮೋಟಾರು ಸೈಕಲ್ಲುಗಳಿಂದ ಚಮತ್ಕಾರ ಪ್ರದರ್ಶನ ನಡೆಯಿತು. ಮಲ್ಲಕಂಭ ಸ್ಪರ್ಧೆ, ಕುಸ್ತಿ ಸ್ಪರ್ಧೆ ನಡೆದವು. ಬಾಣ ಬಿರುಸುಗಳು ಅನೇಕ ಬಣ್ಣಗಳಲ್ಲಿ ಆಕಾಶ ಮುಟ್ಟಿದವು. ಪಂಜಿನ ಕವಾಯತು ನಡೆಯಿತು. ಎಲ್ಲವನ್ನೂ ನೋಡಿದೆವು. ರಾತ್ರಿ ಹತ್ತುಗಂಟೆ ವೇಳೆಗೆ ಮನೆ ತಲುಪಿದೆವು..

ಕನ್ನಡ ವಿಶ್ವ [illegible] ವಿ ಮಟ್ಟದವರೆಗೆ ಉತ್ತಮ
ಹಾಗೂ ಅ [illegible] ಾಗಿ 'ಪಠ್ಯಪುಸ್ತಕ ರಚನಾ
ವಿಭಾಗ'ವನ [illegible] ಾಗಿ ಪಠ್ಯಪುಸ್ತಕ ರಚನೆ
ಮಾಡಬೇಕೆ [illegible] ಶಾಖೆ. ನವಸಾಕ್ಷರರಿಗಾಗಿ
ಪುಸ್ತಕ ಬರ [illegible] ಾಲಯಕ್ಕೆ ವಹಿಸಿಕೊಟ್ಟರು.
ವಿಶ್ವವಿದ್ಯಾಲ [illegible] ರ ಪ್ರಖ್ಯಾತ ಲೇಖಕರನ್ನು,
ಭಾಷಾತಜ್ಞರ [illegible] ಅವರೆಲ್ಲರ ಅಭಿಪ್ರಾಯ,
ಸಲಹೆ, ಸಹ [illegible] ಭಾಷೆ, ಮುದ್ರಣ ವಿನ್ಯಾಸ,
ಚಿತ್ರಗಳ ಮ [illegible] ಅನೇಕ ಸಲ ಚರ್ಚಿಸಿ
ಯೋಜನೆಯ [illegible]

ನವಸಾಕ್ಷರರಿಗ [illegible] ಗಲೇ ಪ್ರಕಟವಾಗಿರುವ
ಪುಸ್ತಕಗಳನ್ನೆಲ [illegible] ಲ್ಲ ಭಾಷಾತಜ್ಞರಿಂದ
ಪರಿಶೀಲಿಸಲಾ [illegible] ೇಮಿಸಿಕೊಂಡು ಅವರಿಗೆ
ಕಮ್ಮಟಗಳನ್ನು [illegible] ನ್ಯಂತ ಆಯ್ದ ಜಿಲ್ಲೆ,
ತಾಲೂಕುಗಳಿಗ [illegible] ತ್ತಿರುವವರಿಂದ ಅದರ
ಗುಣದೋಷಗ [illegible] ಲ್ಲ ವಿಶ್ವವಿದ್ಯಾಲಯದ
ಗಣಕಯಂತ್ರದ [illegible] ಸಹಾಯಕರು ನೀಡಿದ್ದ
ಮಾಹಿತಿಗಳನ್ನೆ [illegible] ಗುಣವಾಗಿ ವಿಷಯದ
ಆದ್ಯತೆಗಳನ್ನು [illegible] ತ ಲೇಖಕರು ನಮ್ಮ
ವಿಶ್ವವಿದ್ಯಾಲಯ [illegible] ು ರೂಪ ಕೊಟ್ಟರು.
ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರಧಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು